ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 24 ಜೂನ್ 15, 1986 ಬೆಲೆ 30 ಪೈಸೆ

ಜೂನ್ 22ರಂದು ನಮ್ಮ ಪ್ರತಿಜ್ಞೆ

ಜೂನ್ 22 ರಂದು ಹಿಟ್ಲರನ ನಾಝಿ ಸೈನ್ಯ ಸೋವಿಯತ್ ದೇಶದ ಮೇಲೆ ಆಕ್ರಮಣ ಮಾಡಿತು. ಧೀರ ಕೆಂಪು ಸೇನೆ ಮತ್ತು ರಶ್ಯದ ಜನತೆ ಹಿಟ್ಲರನನ್ನು ಸೋಲಿಸಿ ಸಮತಾವಾದದ, ಸ್ವಾತಂತ್ರ್ಯದ ಶಾಂತಿಯ ಚರಿತ್ರೆಯನ್ನು ಬರೆದರು. ಆ ಚರಿತ್ರೆಯನ್ನು ಬದಲಾಯಿಸಲು ರೇಗನ್ ಮತ್ತು ಅವನ ಬೆಂಬಲಿಗರು ಅಣ್ವಸ್ತ್ರ ಯುದ್ಧ, ನಕ್ಷತ್ರ ಯುದ್ಧದ ತಯಾರಿಯಲ್ಲಿದ್ದಾರೆ. ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯನ್ನು ಮಣ್ಣು ಮುಕ್ಕಿಸಲು ಸೋವಿಯತ್ ಮತ್ತು ಸಮತಾವಾದಿ ದೇಶಗಳ ಜನರು ಪಣ ತೊಟ್ಟಿದ್ದಾರೆ. ನಾವು ಕೂಡ ಅವರ ಬೆನ್ನೆಲುಬಾಗಿ ನಿಂತು ರೇಗನ್ ಶಾಹಿಯನ್ನು ನಾಶ ಮಾಡಿ ಇಡೀ ಜಗತ್ತಿನಲ್ಲಿಯೇ ಸಮತಾವಾದದ ಬಾವುಟ ಮೆರೆಸುವ ಪಣ ತೊಡೋಣ.

ಎರಡನೇ ಮಹಾಯುದ್ಧದ ದಿಸೆಯನ್ನೇ ಬದಲಾಯಿಸಿದ 22 ಜೂನ್ 1941

ಸೋವಿಯತ್ ದೇಶದ ಮೇಲೆ ನಾಝಿ ಸೈನ್ಯದ ಆಕ್ರಮಣ
ಕೆಂಪು ಸೈನ್ಯದಿಂದ ಹಿಟ್ಲರನ ಪತನ

ಸೋವಿಯತ್ ಯೂನಿಯನಿನ ಮೇಲೆ ಕ್ರೂರ ನಾಜಿಗಳು ಮೋಸಗಾರಿಕೆಯ ಆಕ್ರಮಣ ಮಾಡಿ ಈ ವರ್ಷ ಜೂನ್ 22 ಕ್ಕೆ 45 ವರ್ಷಗಳು ತುಂಬುತ್ತದೆ. ಹಿಟ್ಲರನ ರಾಕ್ಷಸರ ಬಲದಿಂದ ಪ್ರಥಮ ಸಮತಾವಾದಿ ದೇಶ ನಾಶಗೊಳ್ಳುವುದೆಂದು ಬಂಡವಳಶಾಹಿ ಜಗತ್ತಿನ ಅತ್ಯಂತ ಪ್ರತಿಗಾಮಿ ಶಕ್ತಿಗಳು ಕನಸುಕಾಣುತ್ತಿದ್ದವು. ಮ್ಯೂನಿಚ್ ಒಪ್ಪಂದದ ತಿರುಳು ನಿಜವಾಗಿಯೂ ಅದೇ ಆಗಿತ್ತು, ಆದರದು ಗೊಂದಲದಲ್ಲಿ ಮುಕ್ತಾಯವಾಯಿತು. ಸೋವಿಯತ್ ಕೆಂಪು ಸೈನ್ಯದ ಧೀರ ರಕ್ಷಣೆ, ನಾಜಿಗಳಿಂದ ಆಕ್ರಮಿಸಲ್ಪಟ್ಟ ಪ್ರದೇಶಗಳಲ್ಲಿ ಗೆರಿಲ್ಲಾಗಳು ತೋರ್ಪಡಿಸಿದ ಚಾಣಾಕ್ಷತನ ಹಾಗೂ ಧೈರ್ಯ, ಇಡೀ ಸೋವಿಯತ್ ಜನತೆಯ ನಿಷ್ಠಾವಂತ ಕಾರ್ಯ, ಅದರ ಜೊತೆಯಲ್ಲಿಯೇ ಜಗತ್ತಿನ ಸರ್ವ ಕಾರ್ಮಿಕ ವರ್ಗದ ಸೌಹಾರ್ದ ಕಾರ್ಯಕ್ರಮದಿಂದಾಗಿ ನಾಜಿಗಳ ವಿರೋಧಿಯಾದ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳನ್ನು ಸೋವಿಯತ್ ದೇಶದ ರಕ್ಷಕರ ಬೆನ್ನೆಲುಬಾಗಿ ನೆಲೆಗೊಳಿಸಿದ್ದರಿಂದಲೇ, ಪ್ರತೀಕಾರ ಮಾಡಿ ಕೊನೆಯಲ್ಲಿ ನಾಜೀಜಮನ್ನು ಸೋಲಿಸಲು ಸಾಧ್ಯವಾಯಿತು.

ಇಂದು ಕೂಡ ಅಮೇರಿಕದ ರೇಗನ್ ಆಡಳಿತ ಸೋವಿಯತ್ ಯೂನಿಯನ್ ಮತ್ತು ಇತರ ಸಮತಾವಾದಿ ಸಮಾಜವಾದಿ ದೇಶಗಳನ್ನು ನಾಶಮಾಡುವ ಕುತಂತ್ರದಲ್ಲಿದೆ, ಆ ದೇಶಗಳೆಲ್ಲ "ಕೆಟ್ಟ ಶಕ್ತಿಗಳು", ಅವುಗಳ ವಿರುದ್ಧ ಬಂಡವಾಳಶಾಹಿ ಜಗತ್ತು ತಯಾರಿಸಿದ, ಅಣು-ಅಸ್ತ್ರ, ಕೆಮಿಕಲ್ ಹಾಗೂ ಆಕಾಶದಲ್ಲಿ ಉಪಯೋಗಿಸುವ ಅಸ್ತ್ರಗಳನ್ನು ಉಪಯೋಗಿಸಬೇಕೆಂದು ಅವರು ಯೋಚಿಸುತ್ತಿದ್ದಾರೆ. ಆದರೆ ಆ ಯೋಜನೆಗಳು ಬರೇ ಸಮತಾವಾದಿ ದೇಶಗಳ ಮೇಲಷ್ಟೇ ಉಪಯೋಗಿಸಲ್ಪಡದೆ ಎಲ್ಲ ಸ್ವತಂತ್ರ ರಾಷ್ಟ್ರಗಳ ಮೇಲೂ ಪ್ರಯೋಗಿಸಲ್ಪಡುವುದರಿಂದ ಅವು ಬಂಡವಳಶಾಹಿ ದೇಶಗಳಾಗಿರಲಿ-ತಟಸ್ಥ ದೇಶಗಳಾಗಿರಲಿ ಯುದ್ಧಖೋರರ ವಿರುದ್ಧ ಪ್ರತಿಭಟನೆ ಬೆಳೆದು ಬರುತ್ತಿದೆ. ವಿಶ್ವ ಜನಾಂಗದ ಜೀವದ ಕುರಿತು ಕಾಳಜಿ ಉಳ್ಳವರೆಲ್ಲ ಸೋವಿಯತ್ ರಶ್ಯಾ ಮತ್ತು ಇತರ ಸಮಾಜವಾದಿ ದೇಶಗಳು ಮುಂದೆ ಮಾಡಿರುವ ಶಾಂತಿ ಸೂಚನೆಗಳಿಗೆ ಬೆಂಬಲ ನೀಡಲು ಮುಂದಾಗಿದ್ದಾರೆ.

ಆದ್ದರಿಂದ ಸಾಮ್ರಾಜ್ಯಶಾಹಿಗಳು ಸೋವಿಯತ್ ಯೂನಿಯನ್ ಮತ್ತು ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ಅದರ ಪಾತ್ರ ಕುರಿತು ಅವಹೇಳನದ ಪ್ರಕ್ಷೋಭೆ ನಡೆಸಿದ್ದಾರೆ. ಸೋವಿಯತ್ ಯೂನಿಯನಿನ, ಅದರ ವೀರ ಸೈನಿಕರು ಅಲ್ಲದೇ ಯುದ್ಧಕ್ಕೆ ಸೈದ್ಧಾಂತಿಕ, ರಾಜಕೀಯ, ಮತ್ತು ವ್ಯಾವಹಾರಿಕ ಮುಖಂಡತ್ವವನ್ನು ಸೈನಿಕರಿಗೂ ಗುಲ್ಲಾಗಳಿಗೂ, ನಾಗರಿಕರಿಗೂ ನೀಡಿದ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಅವರು ಅಲ್ಪಗೊಳಿಸುತ್ತಿದ್ದಾರೆ. ರಶ್ಯದಲ್ಲಿಯ ನಿಜವಾದ ಈ ಕ್ರಾಂತಿಕಾರಿ ಶಕ್ತಿಗಳಿಂದಾಗಿ ಹಿಟ್ಲರ್ ರಶ್ಯ ಶರಣಾಗತವಾಗಲಿಲ್ಲ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಗುಂಪಿನ ಬಲದಿಂದ ಮಾತ್ರ ಅದು ಸಾಧ್ಯವಾಗಿದೆಂಬುದನ್ನು ತೋರಿಸಿ ಕೊಡಲು ಅವರು ಈ ತರದಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ. ನಾಜಿಗಳನ್ನು ಅತ್ಯಂತ ಹೀನಾಯವಾಗಿ ಸೋಲಿಸಿದ ಸೋವಿಯತ್ ಯೂನಿಯನ್ ಈಗ ಅಮೇರಿಕದ ಸಾಮ್ರಾಜ್ಯಶಾಹಿಗಳ ಮುಂದೆ ಬಲವಂತವಾಗಿ ಶರಣಾಗತವಾಗಲೇ ಬೇಕಾಗುತ್ತದೆಂಬ ತಪ್ಪು ಭಾವನೆಯನ್ನು ಹುಟ್ಟಿಸಲು ಈ ರೀತಿ ಪ್ರಚಾರ ನಡೆಸಿದ್ದಾರೆ.

ರೇಗನನ ಅಣ್ವಸ್ತ್ರ ಮೋಸಗಾರಿಕೆಯ ಮತ್ತು ನಕ್ಷತ್ರ ಯುದ್ಧದ ವಿರುದ್ಧ ಹೋರಾಟ ನಿರುಪಯೋಗವೆಂದು ಹೇಳುವ ಶಕ್ತಿಗಳೂ ವ್ಯಕ್ತಿಗಳೆ ನಮ್ಮ ದೇಶದಲ್ಲಿದ್ದಾರೆ. ಶಾಂತಿ ಚಳುವಳಿ ಯಶಸ್ವಿಯಾಗಬೇಕಾದರೆ ಈ ರೀತಿ ಅಪಪ್ರಚಾರ ಮಾಡುವವರ ವಿರುದ್ಧ ಶಿಸ್ತುಬದ್ಧವಾದ ಹೋರಾಟ ಅಗತ್ಯ.

ಆದ್ದರಿಂದ ಸೋವಿಯತ್ ಯೂನಿಯನ್ನಿನ ಮೇಲೆ ನಾಜಿಗಳು ಯಾವ ಸಂದರ್ಭದಲ್ಲಿ ದಾಳಿಮಾಡಿದರು, ಸೋವಿಯತ್ ಯೂನಿಯನ್ ಸಂಘಟಿಸಿದ ಪ್ರತ್ಯಾಕ್ರಮಣದಿಂದಾಗಿ ಧೀರ ರಕ್ಷಣಾ ಕಾರ್ಯ ನಡೆಯಿತು, ಅದರ ಪರಿಣಾಮವಾಗಿ ಫ್ಯಾಸಿಸ್ಟ್ ವಿರೋಧ ವಿಜಯ ಗಳಿಸಲು ಸಾಧ್ಯವಾಯಿತು ಎಂಬ ವಿಷಯಗಳನ್ನೆಲ್ಲ ಸಾರ್ವಜನಿಕ ಸಭೆ, ವಿಚಾರ ಸಂಕಿರಣ ಮತ್ತಿನ್ನಿತರ ಸ್ವರೂಪದ ಕಾರ್ಯಕ್ರಮಗಳ ಮೂಲಕ ಜನರಿಗೆ ಮನವರಿಕೆ ಮಾಡಿಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ಫಾಸಿಸ್ಟ ವಿರೋಧಿ ಯುದ್ಧದ ಯಶಸ್ವಿಗೊನೆಗಳುವಿಕೆಯ ಚರಿತ್ರಾರ್ಹ ಮಹತ್ವವನ್ನು, ಸಾಮ್ರಾಜ್ಯಶಾಹಿಗಳ ಬೂಟುಕಾಲಿನಡಿಯಲ್ಲಿ ನರಳುತ್ತಿದ್ದ ಹಲವಾರು ದೇಶಗಳನ್ನು ವಿಮುಕ್ತಗೊಳಿಸುವ ಜಗತ್ತಿನ ಚರಿತ್ರೆಯ ಹೊಸ ಅಧ್ಯಾಯ ಇದರಿಂದ ಯಾವ ರೀತಿ ಪ್ರಾರಂಭವಾಯಿತೆಂದೂ ತಿಳಿಯ ಹೇಳುವುದು ಅತ್ಯಗತ್ಯ.

ರಾಮಕೃಷ್ಣ ಹೆಗಡೆ - ಚವ್ಹಾಣ ಮಾತುಕತೆ

ಕರ್ನಾಟಕದ ಗಡಿಪ್ರದೇಶಗಳಾದ ಬೆಳಗಾವಿ, ನಿಪ್ಪಾಣಿ ಮೊದಲಾದೆಡೆಗಳಲ್ಲಿ ಚಳುವಳಿ ಹೂಡುತ್ತೇವೆಂದು ಮ.ಏ. ಸಮಿತಿ [illegible] ಒಂದು ತಿಂಗಳ ನಂತರ, ಮೇ 1ರಂದು ಸತ್ಯಾಗ್ರಹ ಪ್ರಾರಂಭವಾದ 11 ದಿವಸಗಳ ತರುವಾಯ ಕರ್ನಾಟಕ-ಮಹಾರಾಷ್ಟ್ರ ಮುಖ್ಯಮಂತ್ರಿಗಳ ಭೇಟಿ. ಕರ್ನಾಟಕ-ಮಹಾರಾಷ್ಟ್ರ ಗಡಿಪ್ರದೇಶಗಳಲ್ಲಿನ ಭಾಷಾ ಅಲ್ಪ ಸಂಖ್ಯಾತರ ಕುಂದು ಕೊರತೆಗಳನ್ನು ಗಮನಿಸಿ, ಅದರ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕುರಿತು ಸಲಹೆ ನೀಡಲು ಹಿರಿಯ ಅಧಿಕಾರಿಗಳ ಸ್ಥಾಯಿ ಸಮಿತಿ ರಚನೆ. ಕರ್ನಾಟಕ-ಮಹಾರಾಷ್ಟ್ರದ ಇಬ್ಬಿಬ್ಬರನ್ನೊಳಗೊಂಡ [illegible] ಈ ಸಮಿತಿ ಆರುತಿಂಗಳಿಗೊಮ್ಮೆ ಗಡಿಪ್ರದೇಶದಲ್ಲಿ ಸಂಚರಿಸಿ ಪ್ರತ್ಯಕ್ಷ ದರ್ಶನದ ಅನುಭವದ ಮೇಲೆ ರೂಪಿಸಿದ ಪರಿಹಾರ ಕ್ರಮಗಳನ್ನು ಉಭಯ ಸರಕಾರಗಳೂ ಜಾರಿಗೆ ತರಬೇಕೆಂಬ ನಿರ್ಣಯ ಉಭಯ ಮುಖ್ಯಮಂತ್ರಿಗಳ ಭೇಟಿಯ ಫಲಿತಾಂಶ ಅವರಿಬ್ಬರಿಂದಲೂ ಬೆಳಗಾವಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ನಡೆದಿರುವ ಹಿಂಸಾತ್ಮಕ ಚಳುವಳಿಯ ಕುರಿತು ಆತಂಕದ ಗಮನ ಹರಿಸುವಿಕೆ.

ಹತ್ತು ದಿವಸಗಳಿಂದ ಸತತವಾಗಿ ಹಿಂಸಾ[illegible]ದಲ್ಲಿ ತೊಡಗಿ, ರಾಜ್ಯ [illegible] ಲಕ್ಷಾವಧಿ ರೂ. ನಷ್ಟ ಮಾಡಿ, ನಿರಪರಾಧಿ ಏಳು ಜೀವಗಳನ್ನು ಬಲಿತೆಗೆದುಕೊಂಡು ಹಲವಾರು ಜನ ಪೆಟ್ಟು ತಿಂದು, ರೇಲ್ವೆ ಅಪಘಾತದ ಹೊಂಚು ಹೂಡಿ, ಸ್ನೇಹ ಸೌಹಾರ್ದತೆಯಿಂದ ಶಾಂತಿಯುತ ಜೀವನ ನಡೆಸುತ್ತಿದ್ದ ಗಡಿಪ್ರದೇಶದ ಕನ್ನಡ-ಮರಾಠಿಗ[illegible]ಲ್ಲಿ ದ್ವೇಷಭಾವನೆ ಹುಟ್ಟಿಸಿ, ಬೆಳಗಾವಿ ನಗರಕ್ಕೆ ಕುಡಿಯುವ ನೀರಿಗೂ ಸಂಚಗಾರ ಹಾಕಿದ ನಂತರ ಉಭಯ ಮುಖ್ಯಮಂತ್ರಿಗಳ ಭೇಟಿ. ಪ್ರತಿಫಲ ಹೇಳಿಕೊಳ್ಳುವಂಥದ್ದಿಲ್ಲ. 6 ದಿವಸಗಳ ನಂತರ 6-7 ಮಂತ್ರಿಗಳ ಬೆಳಗಾವಿ [illegible] ಪೋಲೀಸ್ ಮೇಲಾಧಿಕಾರಿಗಳ ಸಂದರ್ಶನ. ಹೀಗಿದೆ ಅಧಿಕಾರದ ವೈಖರಿ.

ಚಳುವಳಿ ಹೂಡುತ್ತೇವೆಂದು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಿಂದು ತಿಂಗಳಿಂದ ಹೇಳುತ್ತ ಬಂದಿದ್ದರು ಕರ್ನಾಟಕ ಗಡಿಯಲ್ಲಿ ಸತ್ಯಾಗ್ರಹಕ್ಕೆ ಹೊರಟಾಗಲೂ ಮಹಾರಾಷ್ಟ್ರ ಸರಕಾರ ಅವರ ಮೇಲೇನೂ ಕ್ರಮ ತೆಗೆದುಕೊಳ್ಳಲಿಲ್ಲ. ಅವರನ್ನು ಪ್ರತಿಬಂಧಿಸಲೂ ಇಲ್ಲ. ಹಾಗೆಯೇ ಹೆಗಡೆ ಸರಕಾರ ಕೂಡ "ಅವರೇನು ಮಾಡಿಯಾರು ?" ಎಂಬ ತಪ್ಪು ಆತ್ಮವಿಶ್ವಾಸದಿಂದ ಇಷ್ಟೆಲ್ಲ ಹಾನಿ ಮತ್ತು ಗೊಂದಲಕ್ಕೆ ಕಾರಣವಾಗಿವೆಂದು ಹೇಳಿದರೆ ತಪ್ಪಾಗಲಾರದು. ಎರಡೂ ರಾಜ್ಯ ಸರಕಾರದ ಸಡಿಲತನ ಇಷ್ಟೆಲ್ಲ ಹಾನಿಗೆ, ದೊಂಬಿಗೆ ಕಾರಣವಾಯಿತು.

ಕೆಲವು ಮುಖ್ಯ ವಿಷಯಗಳು ಈ ಚಳುವಳಿಯಿಂದ ಎದ್ದುಕಾಣುತ್ತವೆ. ಕಾಲು ಕೆದರಿ ಜಗಳ ತೆಗೆಯುವಂತೆ ಸಂಕೇಶ್ವರದಲ್ಲಿ ಶಿವಾಜಿ ಪ್ರತಿಮೆಗೆ ಚಪ್ಪಲಿಹಾರ ಹಾಕಿ, ಅದರ ಬ್ಲಾಕನ್ನು ತರುಣ ಭಾರತದಲ್ಲಿ ರೂಪಿಸಿ ದಂಗೆ ಪ್ರಾರಂಭಿಸಲಾಯಿತು. ಕರ್ನಾಟಕದಲ್ಲಿಯ ಮರಾಠಿ ಪ್ರದೇಶ ಮಹಾರಾಷ್ಟ್ರದಲ್ಲಿ ಸೇರಬೇಕೆಂದು ಶಿವಸೇನೆ, ಮಹಾರಾಷ್ಟ್ರ ಏಕೀಕರಣ ಸಮಿತಿ ಚಳುವಳಿ ನಡೆಸಿತು. ಮುಂದಿನ [illegible] ಕೊನೆಯ ಪುಟಕ್ಕೆ

ಆರ್ಥಿಕ ಸಮೀಕ್ಷೆ :

—ಆರ್. ಚಂದ್ರ

ಭೀಕರ ಬರಗಾಲ

ಅಸಮರ್ಪಕ ಪರಿಹಾರ

ಅಸಮರ್ಪಕ ಪರಿಹಾರ

ರಾಷ್ಟ್ರೀಯ ವಾರ್ತಾ ಪತ್ರಿಕೆಗಳು ನಿಯತಕಾಲಿಕಗಳು ವಿಶೇಷ ಅಧ್ಯಯನ ತಂಡಗಳು ನಡೆಸಿದ ಸಮೀಕ್ಷೆಗಳ ಆಧಾರದಲ್ಲಿ (ಇಂಡಿಯನ್ ಎಕ್ಸ್‌ಪ್ರೆಸ್, ವಿಶೇಷ ಲೇಖನ ಮಾಲೆ, ಜನವರಿ, 1986 ಮತ್ತು "ಹಿಂದು" ಗುಂಪಿನ ಫ್ರಂಟ್‌ಲೈನ್ ಪಾಕ್ಷಿಕ ಪತ್ರಿಕೆ ಎಪ್ರಿಲ್–ಮೇ 1986) ಬರಗಾಲ ಪ್ರದೇಶಗಳಲ್ಲಿ ಉದ್ಯೋಗ, ಆಹಾರ ನೀರು, ಮೇವು, ವಸತಿ, ಆರೋಗ್ಯ, ಇತ್ಯಾದಿ ತಾತ್ಕಾಲಿಕ ಪರಿಹಾರ ಕಾರಗಳೂ ಬಹಳ ಅಸಮರ್ಪಕವಾಗಿರುವುದು ತಿಳಿದುಬಂದಿದೆ. ಉದಾಹರಣೆಗೆ ರಾಜಸ್ಥಾನ : ರಾಜಸ್ಥಾನದಲ್ಲಿ 27 ಜಿಲ್ಲೆಗಳಲ್ಲಿ 21 ಜಿಲ್ಲೆಗಳ 219 ಲಕ್ಷ ಜನರು ಭೀಕರ ಬರಗಾಲಕ್ಕೊಳಗಾಗಿದ್ದಾರೆ. ಅವರಲ್ಲಿ ಬೆಳೆ ನಾಶದಿಂದಾಗಿ, 50 ಲಕ್ಷ ಕೃಷಿಕಾರ್ಮಿಕರು ಪೂರ್ಣ ನಿರುದ್ಯೋಗಿಗಳಾಗಿದ್ದಾರೆ, ನಿರ್ಗತಿಕರಾಗಿದ್ದಾರೆ, 21 ಲಕ್ಷ ಬಡರೈತರಿಗೆ ವರ್ಷಕ್ಕೆ 6 ತಿಂಗಳಷ್ಟು ಕೆಲಸ ಇಲ್ಲದೆ ಶೋಚನೀಯಸ್ಥಿತಿಯಲ್ಲಿದ್ದಾರೆ. ಪರಿಹಾರ ಕೇಂದ್ರಗಳಲ್ಲಿ ಜನವರಿ 86 ರಲ್ಲಿ ಕೇವಲ 2.5 ಲಕ್ಷ ಜನರಿಗೆ ಕೆಲಸ ಒದಗಿಸಲಾಗಿದ್ದು, ಎಪ್ರಿಲ್ 86ರಲ್ಲಿ 7 ಲಕ್ಷ ಜನರಿಗಷ್ಟೇ ಕೆಲಸ ಕೊಡಿಸುವ ಆಶ್ವಾಸನೆ ನೀಡಲಾಗಿದೆ. ಅಲ್ಪಸ್ವಲ್ಪ ಪರಿಹಾರಗಳೂ ಅಧಿಕ ಸಂಖ್ಯೆಯ ಜನರಿಗೆ ಮುಟ್ಟಲೇ ಇಲ್ಲ.

ಈ ರಾಜ್ಯದ ಪರಿಹಾರ ಕೇಂದ್ರಗಳಲ್ಲಿ ಹೆಚ್ಚಾಗಿ ಶೇ 70ರಷ್ಟು ಜನರು ಮಹಿಳೆಯರೇ ದುಡಿಯುತ್ತಿದ್ದಾರೆ. ಗಂಡಸರು, ಗಣಿಕೆಲಸ, ಗಿರಣಿ ಕೆಲಸ, ಜಾನುವಾರು ಸಾಕಣೆ ಕೆಲಸ ಅಥವಾ ಕುಡಿತ ಅಫೀಮು ಸೇವನೆಯಲ್ಲಿ ನಿರತರಾಗಿರುತ್ತಾರೆ. ಮನೆ ಖರ್ಚು ನಿರ್ವಹಣೆ, ಮಕ್ಕಳ ಲಾಲನೆ ಪಾಲನೆ ಮಹಿಳೆಯರ ಮೇಲೆಯೇ ಬರುವುದು. ಮಕ್ಕಳು ಕೆಲಸದ ಸ್ಥಳಗಳಲ್ಲಿಯೇ ಬಿದ್ದಿರಬೇಕಾಗುವುದು. ಅವುಗಳ ಕ್ಷೇಮಸಮಾಚಾರ ನೋಡಿಕೊಳ್ಳಲು ಪ್ರತ್ಯೇಕ ವ್ಯವಸ್ಥೆಗಳಿಲ್ಲ. ಪ್ರಧಾನಿ ರಾಜೀವ ಗಾಂಧಿ ಒಂದೆಡೆ ಸಂದರ್ಶನದಲ್ಲಿ ಕೇಳುತ್ತಾರೆ. ಮಕ್ಕಳನ್ನೇಕೆ ಕೆಲಸದ ಸ್ಥಳಗಳಿಗೆ ಕರೆದುಕೊಂಡು ಬಂದಿರಿ ಎಂದು. ಅವರಿಗೇನು ಗೊತ್ತು ಬಡವರ ಮನೆಯ ಪರಿಸ್ಥಿತಿ ? ಪರಿಹಾರ ಕೇಂದ್ರಗಳಲ್ಲಿ ಕನಿಷ್ಟ ಕೂಲಿ 11ರೂಆಗಿದ್ದರೂ, ಅದಕ್ಕೆ ನಿಗದಿಗೊಳಿಸಿದ ಗರಿಷ್ಟ ಪ್ರಮಾಣದ ಕೆಲಸವನ್ನು ಅರೆ ಹೊಟ್ಟೆಯ ಸಾಮಾನ್ಯ ಕೆಲಸಗಾರರು ಪೂರೈಸಲು ಸಾಧ್ಯವಿಲ್ಲ. ಅದುದರಿಂದ ಅವರ ಸರಾಸರಿ ಗಳಿಕೆಯು ದಿನಕ್ಕೆ ರೂ 5–6 ಕ್ಕಿಂತ ಹೆಚ್ಚಾಗಲಾರದು. ಬಡರೈತರು, ಕೃಷಿಕಾರ್ಮಿಕರು ಸಾಲದಲ್ಲಿ ಮುಳುಗಿದ್ದಾರೆ. ಅವರು ಒತ್ತೆ ಇಟ್ಟ ಭೂಮಿ, ವ್ಯವಸಾಯ ಸಲಕರಣೆಗಳು, ಜಾನುವಾರು, ಪಾತ್ರೆ, ಆಭರಣ, ಶೋಷಕ ಸಾಲಗಾರರಿಂದ ಮರಳಿ ಪಡೆಯುವುದು ಅಸಾಧ್ಯ. ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಪರಿಹಾರ ಕೇಂದ್ರಗಳಲ್ಲಿ ಕೆಲಸ ಸಿಗಬಹುದಾದ್ದರಿಂದ, ಕುಟುಂಬದಲ್ಲಿ ಅರೆಹೊಟ್ಟೆ ಉಪವಾಸ ತಪ್ಪಲಾರದು. ಬರಗಾಲದಿಂದ ಜನರು ಸಾಯದಿದ್ದರೂ, ಅವರು ಬದುಕುವುದೇ ಅಸಾಧ್ಯ ಅಸಹನೀಯವಾಗುತ್ತಿದೆ !

ಗುಜರಾತ್ :

ಗುಜರಾತ್ ರಾಜ್ಯದಲ್ಲಿ 18275 ಹಳ್ಳಿಗಳಲ್ಲಿ 12720 ಹಳ್ಳಿಗಳ ಜನರು ಬರಗಾಲಕ್ಕೊಳಗಾಗಿದ್ದಾರೆ. ಮೇವು ನೀರಿನ ಅಭಾವದಿಂದಾಗಿ ಜಾನುವಾರುಗಳ ಸಂರಕ್ಷಣೆ ಕಷ್ಟಸಾಧ್ಯವಾಗುತ್ತಿದೆ. ಪರಿಹಾರ ಕೇಂದ್ರಗಳಲ್ಲಿ ಮಾರ್ಚ್ 86ರಲ್ಲಿ 9 ಲಕ್ಷ ಜನರಿಗೆ ಪ್ರತಿದಿನ ಕೆಲಸ ಒದಗಿಸಲಾಗಿದೆ ಎಂದೂ ಮುಂದಿನ ತಿಂಗಳುಗಳಲ್ಲಿ ಉದ್ಯೋಗಾವಕಾಶಗಳನ್ನು ಇಮ್ಮಡಿಗೊಳಿಸಲಾಗುವುದೆಂದೂ ಸರಕಾರದ ವಕ್ತಾರರು ಹೇಳುತ್ತಿದ್ದಾರೆ. ಆದರೆ, ಬರಗಾಲ ಸಂತ್ರಸ್ಥರ ಒಟ್ಟು ಸಂಖ್ಯೆಗೆ ಹೋಲಿಸಿದರೆ ಪರಿಹಾರ ಕಾರ್ಯಗಳ ಪ್ರಮಾಣ ತೀರಾ ಗೌಣವಾಗಿರುವುದನ್ನು ಗಮನಿಸಬಹುದು. ಕನಿಷ್ಟ ಕೂಲಿ ರೂ.11 ಎಂದು ನಿಗದಿ ಮಾಡಿದ್ದರೂ, ಅದು ಗರಿಷ್ಟ ಕೆಲಸದ ಪ್ರಮಾಣಕ್ಕೆ ಅನ್ವಯಿಸಿರುವುದರಿಂದ, ಬಡಜನರಿಗೆ ತಲಾ ದಿನಕ್ಕೆ 5–6 ಕ್ಕಿಂತ ಹೆಚ್ಚು ಕೂಲಿ ಗಳಿಸಲು ಅಸಾಧ್ಯ.

ಈ ರಾಜ್ಯದ ಸೌರಾಷ್ಟ್ರದ ರಾಜಕೋಟ್‌ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದೆ. ನಗರದ 5.5 ಲಕ್ಷ ಜನರಿಗೆ ದಿನಕ್ಕೆ 13ಮಿ ಗ್ಯಾಲನ್ ನೀರು ಬೇಕಾಗಿದ್ದರೆ, ನಗರಸಭೆ ದಿನಕ್ಕೆ 15 ನಿಮಿಷಗಳ ಅವಧಿಯಲ್ಲಿ ಕೇವಲ 3 ಮಿ ಗ್ಯಾಲನ್ ನೀರನ್ನು ಸರಬರಾಜು ಮಾಡಲು ಶಕ್ತವಾಗಿದೆ. 200–250 ಕಿ.ಮಿ. ದೂರದ ಗಾಂಧಿನಗರ ಮತ್ತು ಆನಂದನಗರದಿಂದ ನೀರು ತರಲು ನಗರಸಭೆಯಲ್ಲಿ ಸಾಕಷ್ಟು ಟ್ಯಾಂಕುಗಳೇ ಇಲ್ಲ. ಇದ್ದ ಟ್ಯಾಂಕರುಗಳು ಕೆಟ್ಟುನಿಂತಿವೆ. ರಾಜೀವ ಗಾಂಧಿಯ ಇತ್ತೀಚೆಗಿನ ಭೇಟಿಯ ನಂತರವೇ ನೀರು ಸರಬರಾಜು ಮಾಡಲು ಟ್ಯಾಂಕರುಗಳನ್ನು ಖರೀದಿಸಲಿಕ್ಕೆ ನಗರಸಭೆ ರೂ. 10 ಕೋಟಿ ಧನಸಹಾಯದ ಘೋಷಣೆ ಆಯಿತು. ಅದುವರೆಗೆ ನಗರಸಭೆ ಮತ್ತು ಕಾಂಗ್ರೆಸ್ ರಾಜ್ಯ ಸರಕಾರ ಏನು ಮಾಡುತ್ತಿದ್ದವು ? ಕುಡಿಯುವ ನೀರನ್ನು ಒದಗಿಸುವ ಖಾಸಗೀಉದ್ಯಮ ನಗರದಲ್ಲಿ ಅತಿ ಲಾಭದಾಯಕವಾಗುತ್ತಿದೆ ! ಕೆಲವು ಶ್ರೀಮಂತ ರೈತರೂ, ನಗರಸಭಾ ಸದಸ್ಯರೂ, ತಮ್ಮ ಟ್ರಾಕ್ಟರ್, ಲಾರಿ, ಬಾವಿಗಳ ಪ್ರಯೋಜನ ಪಡೆದು ನೀರು ಸರಬರಾಜಿನ ಉದ್ಯೋಗವನ್ನು ವ್ಯವಸಾಯಕ್ಕಿಂತಲೂ ಲಾಭದಾಯಕವಾಗಿ ನಡೆಸುತ್ತಿದ್ದಾರೆ ! ಒಂದು ಬ್ಯಾರಲ್ ನೀರಿಗೆ ರೂ 5 ಬೆಲೆ, ಒಂದು ಟ್ಯಾಂಕರ್‌ನೀರಿಗೆ ರೂ 80 ಬೆಲೆ. ನಗರ ನಿವಾಸಿಗಳ ನೀರಿನ ಬಿಲ್ಲು, ಹಾಲಿನ ಬಿಲ್ಲಿಗಿಂತಲೂ ಹೆಚ್ಚಾಗಿದೆ ! ಖಾಸಗೀ ನೀರು ಸರಬರಾಜು ಶುದ್ಧೀಕರಣವಾಗದೆ ನಗರದಲ್ಲಿ ಸಾಂಕ್ರಾಮಿಕ ರೋಗಗಳೂ ಹಬ್ಬುತ್ತಿವೆ.

ಕರ್ನಾಟಕ :

ಕರ್ನಾಟಕದಲ್ಲಿ 19 ಜಿಲ್ಲೆಗಳಲ್ಲಿ 1984–85 ರಲ್ಲಿ 16ಜಿಲ್ಲೆಗಳು, 133 ತಾಲೂಕುಗಳು, 15333 ಗ್ರಾಮಗಳು, 144 ಲಕ್ಷ ಜನಸಂಖ್ಯೆ ಮತ್ತು 83 ಲಕ್ಷ ಜಾನುವಾರುಗಳು ತೀವ್ರ ಬರಗಾಲಕ್ಕೊಳಗಾಗಿದ್ದವು. 1985–86 ರಲ್ಲಿ ಅನುಕ್ರಮವಾಗಿ 18 ಜಿಲ್ಲೆಗಳು, 146 ತಾಲೂಕುಗಳು, 19644ಗ್ರಾಮಗಳು, 220 ಲಕ್ಷ ಜನಸಂಖ್ಯೆ ಮತ್ತು 110 ಲಕ್ಷ ಜಾನುವಾರುಗಳು ಭೀಕರ ಬರಗಾಲಕ್ಕೊಳಗಾಗಿವೆ. ಜೊತೆಗೇ 16.18 ಲಕ್ಷ ಬಡರೈತರೂ, 23.94 ಲಕ್ಷ ಕೃಷಿ ಕಾರ್ಮಿಕರೂ ಬರಗಾಲದ ಭಯಂಕರ ದುಃಸ್ಥಿತಿಗೊಳಗಾಗಿದ್ದಾರೆ. (ಕರ್ನಾಟಕಸುದ್ದಿಸಮಾಚಾರಇಲಾಖೆ, ಇಂಡಿಯನ್‌ಎಕ್ಸ್‌ಪ್ರೆಸ್, 12.4.86) ಬೆಳೆನಾಶ, ನಿರುದ್ಯೋಗ, ನೀರು–ಮೇವುಗಳ ಅಭಾವ, ಜಾನುವಾರುಗಳ ಅಗ್ಗದ ಮಾರಾಟ ಹಾಗೂ ಕಟುಕರ ಕೈಯಲ್ಲಿ ಸಾವು. ಆಹಾರ ಧಾನ್ಯಗಳ ಅಭಾವ, ಸಾಮೂಹಿಕ ವಲಸೆ, ಕೂಲಿದರಗಳಲ್ಲಿ ಇಳಿಮುಖ, ಅನಾರೋಗ್ಯ, ಶೋಷಣೆ, ಇತ್ಯಾದಿ ಸಮಸ್ಯೆಗಳಿಂದ ಬಡ ಜನರು ಕರಗಿ ಕಂಗಾಲಾಗಿದ್ದಾರೆ. ಹಿಂದಿನ ಕಾಂಗ್ರೆಸ್ ಸರಕಾರಗಳಿಗೆ ಹೋಲಿಸಿದರೆ, ರಾಜ್ಯದ ಜನತಾ ಸರಕಾರ ಬರಗಾಲ ಪರಿಹಾರ ಕಾರ್ಯಗಳನ್ನು ಸ್ವಲ್ಪ ಮಟ್ಟಿಗಾದರೂ ಒಳ್ಳೆಯ ರೀತಿಯಲ್ಲಿ ನಿರ್ವಹಿಸುತ್ತಿದೆ ಎನ್ನಬಹುದು. ಆದರೆ ಜನತಾ ಸರಕಾರವೂ ಕಾಂಗ್ರೆಸ್ ಸಂಸ್ಕೃತಿಯಿಂದ ಮುಕ್ತವಾಗಿಲ್ಲ ಭ್ರಷ್ಟಾಚಾರ ಸ್ವಜನಪಕ್ಷಪಾತ, ಅದಕ್ಷತೆ, ನೌಕರಶಾಹಿ ಧೋರಣೆ, ಪಕ್ಷದ ಆಂತರಿಕ ಕಲಹ ಮತ್ತು ಗುಂಪುಗಾರಿಕೆ, ಇತ್ಯಾದಿ ಕುಂದುಕೊರತೆಗಳಿಂದಾಗಿ ಬರಗಾಲಪರಿಹಾರ ಕಾರ್ಯಗಳನ್ನು ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿ, ತೃಪ್ತಿಕರವಾಗಿ ನೆರವೇರಿಸಲು ಸೋತಿದೆ ದಿನದಿನಕ್ಕೂ ಜನರ ವಿಶ್ವಾಸವನ್ನು ಕಳೆದುಕೊಂಡು ಕಾಂಗ್ರೆಸಿನ ಪಿತೂರಿಗಳಿಗೆ ಬಲಿಯಾಗುತ್ತಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಒದಗಿಸಲು ಈಗಾಗಲೇ 92500 ಕೊಳವೆಬಾವಿಗಳಿರುವುದಾಗಿ ಹೇಳಿಕೊಂಡರೂ, ರಾಜ್ಯದ 2000 ಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಇಂದಿಗೂ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಕೊಳವೆಬಾವಿಗಳಲ್ಲಿಯೂ ಅನೇಕ ಕಡೆಗಳಲ್ಲಿ ಸವಳು ನೀರು ಬಂದು ಕುಡಿಯಲು ಉಪಯೋಗವಿಲ್ಲ. ಕುಡಿಯಲು ನೀರು ಸಾಗಿಸುವ ಕೆಲಸವೂ ತೃಪ್ತಿಕರವಾಗಿಲ್ಲ, ಕಳೆದ 5–6 ತಿಂಗಳುಗಳಿಂದ ಬೆಂಗಳೂರಿನಂತಹ ನಗರದಲ್ಲಿಯೇ ಕುಡಿಯುವ ನೀರು ವಾರದ 2–3 ದಿನಗಳಿಗೊಮ್ಮೆಯೂ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಇತರ ನಗರ ಪ್ರದೇಶಗಳಲ್ಲಿಯೂ ಇಂತಹ ದುಃಸ್ಥಿತಿಯಲ್ಲಿಯೇ ಇದೆ.

ರಾಜ್ಯದ ನಿರುದ್ಯೋಗಿ ಹಾಗೂ ಅರೆ ಉದ್ಯೋಗಿ ಕೃಷಿ ಕಾರ್ಮಿಕರ ಮತ್ತು ಬಡರೈತರ ಸಂಖ್ಯೆಯೇ 40 ಲಕ್ಷಕ್ಕಿಂತಲೂ ಹೆಚ್ಚು ಇರುವಾಗ, 1986 ಫೆಬ್ರುವರಿಯಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸುಮಾರು 6 ಲಕ್ಷ ಜನರಿಗಷ್ಟೇ, ಶೇ 15 ರಷ್ಟು ಜನರಿಗಷ್ಟೇ, ಉದ್ಯೋಗಾವಕಾಶಗಳನ್ನು ಒದಗಿಸಲಾಗಿತ್ತು. ಇನ್ನೊಂದು ಸಮೀಕ್ಷೆಯಂತೆ 1985–86 ರಲ್ಲಿ ಬರಗಾಲ ಪ್ರದೇಶಗಳಲ್ಲಿ ಒಟ್ಟು 948.25 ಲಕ್ಷ ಮಾನವ ದಿನಗಳ ಉದ್ಯೋಗಾವಕಾಶಗಳನ್ನು ಒದಗಿಸಲಾಗಿತ್ತು ಎಂದು ಹೇಳಲಾಗಿದೆ. 40 ಲಕ್ಷ ಕೃಷಿಕಾರ್ಮಿಕರಿಗೆ, ಬಡರೈತರಿಗೆ ವರ್ಷಕ್ಕೆ 6 ತಿಂಗಳ ಅವಧಿಯಲ್ಲಾದರೂ ಉದ್ಯೋಗಾವಕಾಶಗಳನ್ನು ಕೊಡಬೇಕಾಗಿದ್ದರೆ, ಈ ವರ್ಷ ಒಟ್ಟು ಕನಿಷ್ಟ 7300 ಲಕ್ಷ ಮಾನವ ದಿನಗಳ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕಾಗಿತ್ತು. ಜನರ ಅತ್ಯಗತೆಗೂ ಸರಕಾರದ ಪೂರೈಕೆಗೂ ಎಷ್ಟು ಅಂತರ ಎಂದು ಇದರಿಂದ ಸ್ಪಷ್ಟವಾಗುವುದು. ಕನಿಷ್ಟ ಕೂಲಿ ರೂ. 7–80 ಎಂದು ನಿಗದಿಯಾಗಿದ್ದರೂ, ಪರಿಹಾರ ಕೇಂದ್ರಗಳಲ್ಲಿ ದಿನಕ್ಕೆ ರೂ 4–5 ಕ್ಕಿಂತಹೆಚ್ಚು ಕೂಲಿಗಳಿಸಲು ಸಾಧ್ಯವಿಲ್ಲ. ಬರಗಾಲ ಪೀಡಿತ ಜನರು ನೆರೆಯ ಪಟ್ಟಣಗಳಿಗೆ ರಾಜ್ಯಗಳಿಗೆ ಬೃಹತ್ ಪ್ರಮಾಣದಲ್ಲಿ ವಲಸೆ ಹೋಗುವುದರಿಂದ ಆ ಪ್ರದೇಶಗಳಲ್ಲಿಯೂ ಕೂಲಿದರ ಇಳಿಮುಖವಾಗಿ ಬಡಜನರ ಶೋಷಣೆ ಇನ್ನಷ್ಟು ಹರಿತವಾಗುತ್ತಿದೆ. ಮಕ್ಕಳನ್ನು ವರ್ಷಕ್ಕೆ ತಲಾ ರೂ 300–400 ಕೂಲಿ ಮುಂಗಡ ಪಡೆದು ಶ್ರೀಮಂತರ ಹೊಲ ಕಾರ್ಖಾನೆಗಳಿಗೂ ಕಳಿಸಲಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 83 ಲಕ್ಷ ಜಾನುವಾರುಗಳು ಬರಗಾಲಕ್ಕೊಳಗಾಗಿರುವಾಗ ಕೇವಲ 25000 ಜಾನುವಾರುಗಳನ್ನು ರಕ್ಷಿಸಲು ಗೋಶಾಲೆಗಳನ್ನು ನಡೆಸಲಾಗುತ್ತಿದೆ. ಇವುಗಳನ್ನು ತಡವಾಗಿ ಪ್ರಾರಂಭಿಸಿದುದರಿಂದ, ಬಹಳಷ್ಟು ಜಾನುವಾರಗಳು ಅಗ್ಗದ ಬೆಲೆಗಳಲ್ಲಿ, ರೂ. 2000 ಬೆಲೆ ಬಾಳುವ ಒಂದು ಜೊತೆ ಎತ್ತುಗಳನ್ನು ರೂ 150–200ಕ್ಕೆ ಕಟುಕರ ಕೈಸೇರಿಯಾಗಿದ್ದವು. ಬೆಳಗಾಂನಲ್ಲಿ ರೂ 2 ಲಕ್ಷ ಬೆಲೆಬಾಳುವ ಜಾನುವಾರುಗಳನ್ನು ರೂ 4000 ಕ್ಕೆ ಮಾರಿರುವುದು ವರದಿಯಾಗಿದೆ. ಆಗ ಮಾರಿದ ಬೆಲೆಯೂ ಒಮ್ಮೆಗೆ ಇಳಿಮುಖವಾಗಿತ್ತು ! ಗೋಶಾಲೆಗಳ ಹೊರಗೂ ಒಳಗೂ ಜಾನುವಾರುಗಳ ರಕ್ಷಣೆಗೆ ಸಾಕಷ್ಟು ಮೇವು ನೀರು ಒದಗಿಸಲು ಸರಕಾರ ಸೋತಿದೆ. ಒಂದು ಲಾರಿ ಮೇವಿನ ಬೆಲೆ ರೂ. 2000 ಕ್ಕೂ ಮೀರಿದೆ. ಮೇವಿನ ಬೆಲೆ ಹತ್ತು ಪಾಲು ಹೆಚ್ಚಾಗಿದೆ. ಬರಗಾಲದಿಂದಾಗಿ ರಾಜ್ಯದ ಶೇ50ರಷ್ಟು ಜಾನುವಾರು ಸಂಪತ್ತು ನಾಶವಾಗುವ ಭಯವಿದೆ. ಬಡರೈತರು ತಮ್ಮ ಅಲ್ಪಸಂಪತ್ತಿನಲ್ಲಿ ಒಂದು ಜೊತೆ ಎತ್ತು ಒಂದೆರಡು ದನಕರುಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ಸಹಕಾರಿ ಸಂಘಗಳೂ, ಬ್ಯಾಂಕುಗಳೂ, ಖಾಸಗೀ ಸಾಲಗಾರರೂ ತಮ್ಮ ಸಾಲಗಳನ್ನು ಈ ಕಷ್ಟಕಾಲದಲ್ಲಿಯೇ ನಿದಾಕ್ಷಿಣ್ಯವಾಗಿ ವಸೂಲಿಮಾಡಿಕೊಳ್ಳುತ್ತಿದ್ದಾರೆ.

ಬರಗಾಲ ಪೀಡಿತ ಪ್ರದೇಶಗಳಲ್ಲಿ

(7ನೆಯ ಪುಟಕ್ಕೆ)

ಮುಳವಾಡ ಯಾತ ನೀರಾವರಿ ಮಹತ್ವ

—ಎನ್.ಕೆ. ಉಪಾಧ್ಯಾಯ

(ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಹರಿಯುತ್ತಿದ್ದರೂ ಬರಗಾಲ ಆ ಜಿಲ್ಲೆಗೆ ತಪ್ಪಿದ್ದಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ಒಂದು ಭಾಗವಾಗಿ ಮುಳುವಾಡ ಯಾತ ನೀರಾವರಿಯನ್ನು ಕೂಡಲೇ ಪ್ರಾರಂಭಿಸಬೇಕೆಂದು ಒತ್ತಾಯಿಸಿ ನಾಲ್ವರು ಸ್ವಾತಂತ್ರ್ಯಯೋಧರು ಆಮರಣ ಉಪವಾಸವನ್ನು ಜೂನ 2 ರಿಂದ ಪ್ರಾರಂಭಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಪ್ರಾಂತ ರೈತ ಸಂಘ, ಇತರ ಸಂಘ–ಸಂಸ್ಥೆಗಳೆಲ್ಲ ಅದಕ್ಕೆ ಬೆಂಬಲ ನೀಡಿದ್ದವು. ಬಿಜಾಪುರದ ವಕೀಲರ ಸಂಘ ಪ್ರಾರಂಭದ ದಿನಸವೇ ಮೆರವಣಿಗೆ ತೆಗೆದು, ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ, 2 ದಿನಸ ಹಿರಿಯ ವಕೀಲರು ಅನ್ನಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ನೂರಾರೂ ಮಹಿಳೆಯರೂ, ಗ್ರಾಮಾಂತರ ಪ್ರದೇಶದ ರೈತರು ಸರತಿ ಸತ್ಯಾಗ್ರಹ ಮಾಡಿದರು. ಕ್ಯಾಬಿನೆಟ್ ಮಂತ್ರಿ ಜೆ. ಎಸ್. ದೇಶಮುಖ, ಲೋಕಸಭ ಸದಸ್ಯರಾದ ಗುರಡ್ಡಿ, ಶಾಸಕರಾದ ಬಿ. ಎಂ. ಪಾಟೀಲ (ಕಾಂಗ್ರೆ) ಜೇಡ ಅವರೆಲ್ಲ ಎರಡು ದಿವಸ ಚರ್ಚಿಸಿ ಶ್ರಾವಣ ಮಾಸದೊಳಗಾಗಿ ಜ್ಯಾಕ್‌ವೆಲ್ ಕೆಲಸ ಪ್ರಾರಂಭಿಸುವುದಾಗಿ ಆಶ್ವಾಸನೆ ಕೊಟ್ಟ ನಂತರ ಆಮರಣ ಉಪವಾಸ ಮುಕ್ತಾಯ ಗೊಳಿಸಲಾಯಿತು.

ಆ ಸಂದರ್ಭದಲ್ಲಿ ಯೋಜನೆಯ ವಿವರಣೆ ತಿಳಿಸಬೇಕೆಂದು ರೈತರು ಆಗ್ರಹಪಡಿಸಿದಾಗ ಈ ಲೇಖನ ಬರೆಯಲಾಗಿದೆ.)

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟೀಷರು ಕೃಷ್ಣಾ ನದಿಗೆ ಆಲಮಟ್ಟಿ, ಹಿಪ್ಪರಗಿ, ಛಾಯಾ, ಭಗವತಿಗಳಲ್ಲಿ ಆಣೆಕಟ್ಟು ಕಟ್ಟಿ, ಆಯಾ ಭಾಗದ ರೈತರಿಗೆ ನೀರ ನ್ನೊದಗಿಸಲು ಯೋಜನೆ ತಯಾರಿಸಿದ್ದರು. ಆಲಮಟ್ಟಿ ಯೋಜನೆಯಿಂದ ಸದಾಕಾಲ ಬರಗಾಲಕ್ಕೆ ತುತ್ತಾಗುವ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ, ಸಿಂದಗಿ, ಇಂಡಿ ತಾಲೂಕುಗಳ ಕೆಲವೇ ಕ್ಷೇತ್ರಕ್ಕೆ ನೀರು ಪೂರೈಕೆಯಾಗುತ್ತಿರುವುದರಿಂದ ಜಿಲ್ಲೆಯ ಬಿಜಾಪುರ. ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿಯ ಎಲ್ಲಾ ಕ್ಷೇತ್ರಕ್ಕೆ ನೀರು ಪೂರೈಸುವ ಸಲುವಾಗಿ ಮುಳವಾಡದ ಹತ್ತಿರ ಯಾತ ನೀರಾವರಿಯನ್ನು ಸೂಚಿಸಿದ್ದರು.

1964 ರಲ್ಲಿ ಬಿಜಾಪುರದಲ್ಲಿ ಕಮ್ಯುನಿಸ್ಟ ಪಾರ್ಟಿ ಸತ್ಯಾಗ್ರಹ ಕೈಕೊಂಡಾಗ ಎಲ್ಲಾ ಸಂಘ–ಸಂಸ್ಥೆಗಳೂ ಗ್ರಾಮಾಂತ ಪ್ರದೇಶದ ರೈತರೂ ಅದರಲ್ಲಿ ಭಾಗವಹಿಸಿ ಪ್ರಭಾವ ಬೀರಿದ ಕಾರಣ ಕೇಂದ್ರ ಮಂತ್ರಿಗಳು ಬಂದು ಅಡಿಗಲ್ಲು ಹಾಕಿದ ನಂತರ ಅವೆ ವೇಗದಿಂದ ಆ ಕೆಲಸ ನಡೆದಿದೆ. ವಿಶ್ವ ಬ್ಯಾಂಕ ಕೂಡ ಅದಕ್ಕೆ ಸಹಾಯ ಮಾಡಿದೆ. ಆಲಮಟ್ಟಿ ಯೋಜನೆಯಾದರೆ ಬಾಗಲಕೋಟೆ ನಗರ ಮುಳುಗುವುದರಿಂದ ಅಲ್ಲಿಯ ರಾಜಕಾರಣಿಗಳ ಪ್ರಭಾವಕ್ಕೊಳಗಾಗಿ ನಿಜಲಿಂಗಪ್ಪನವರು ಆಲಮಟ್ಟಿ ಯೋಜನೆಯ ಕೆಲಸವನ್ನು ನಿಧಾನಗೊಳಿಸಿದ ಕಾರಣ ಕೃಷ್ಣಾ ನದಿಯ ನೀರು ಬಿಜಾಪುರ ಜಿಲ್ಲೆಗೆ ಲಭ್ಯವಾಗುತ್ತಿಲ್ಲ. ಆಲಮಟ್ಟಿ ಯೋಜನೆಗೆ ಬಾಗಲಕೋಟೆಯವರ ವಿರೋಧ ಕಂಡ ವೀರೇಂದ್ರ ಪಾಟೀಲರು, ತಾವು ಮುಖ್ಯಮಂತ್ರಿಯಾಗಿದ್ದಾಗ, ಆಲಮಟ್ಟಿಯನ್ನು ಕೈಬಿಟ್ಟು ನಾರಾಯಣಪುರ ಪ್ರಾರಂಭಿಸಿ ರಾಯಚೂರು–ಗುಲ್ಬರ್ಗ ಪ್ರದೇಶಗಳಿಗೆ ನೀರಿನ ಸೌಲಭ್ಯ ಒದಗಿಸಿದ್ದಾರೆ. ಆಲಮಟ್ಟಿ ಯೋಜನೆಗಾಗಿ ಒತ್ತಾಯ ಬಂದಂತೆ ವಿಶ್ವಬ್ಯಾಂಕ ಸಹಾಯದಿಂದ ಆ ಕೆಲಸವೂ ನಡೆಯುತ್ತಿದೆ. ಅದರ ಜೊತೆಯಲ್ಲಿಯೇ ಮುಳುವಾಡ ಯಾತ ನೀರಾವರಿಯ ಕೆಲಸ ಕೂಡ ಪ್ರಾರಂಭವಾಗಬೇಕಾದ್ದು ಅತ್ಯಗತ್ಯ.

ಅಂದಿನ ಕೇಂದ್ರ ನೀರಾವರಿ ಮಂತ್ರಿ ಡಾ. ಕೆ. ಎಲ್. ರಾವ್ 1964 ರಲ್ಲಿ ಆಲಮಟ್ಟಿಗೆ ಬಂದಾಗ "ಎಂಥ ಸುಂದರವಾದ ಉತ್ತಮ ದೃಶ್ಯ ಆಣೆಕಟ್ಟಿಗಾಗಿ" ಎಂದು ಉದ್ಗಾರ ತೆಗೆದಿದ್ದರು. ಆದರೆ ರಾಜ್ಯದ ರಾಜಕಾರಣಿಗಳು ಆ ಸುಂದರ ದೃಶ್ಯವನ್ನು ಉಪಯೋಗಿಸಿ ಆಣೆಕಟ್ಟು ಮುಗಿಸಲಿಲ್ಲ. ಈಗ ಮುಳವಾಡ ಯಾತ ನೀರಾವರಿ ಕುರಿತು ತಜ್ಞರು "ಎಷ್ಟು ಸೌಭಾಗ್ಯವಂತರಪ್ಪ ನೀವು, ಅತಿ ಎತ್ತರವಾದ ಮುಳುವಾಡದಿಂದ ಐದು ತಾಲೂಕಿನ ಲಕ್ಷಾವಧಿ ಎಕರೆ ಭೂಮಿಗೆ ಏನೂ ಖರ್ಚು–ಶ್ರಮವಿಲ್ಲದೆ ನೀರನ್ನು ಪೂರೈಸುವ ಯೋಜನೆ ಜಗತ್ತಿನಲ್ಲೇ ವಿರಳ" ಎಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಹಾಗಾದರೆ ಮುಳುವಾಡ ಯಾತ ನೀರಾವರಿ ಅಂದರೆ ಏನು–

ಕೃಷ್ಣಾ ನದಿಗೆ ಆಲಮಟ್ಟಿಯ ಹತ್ತಿರ ಕಟ್ಟುವ ಆಣೆಕಟ್ಟಿನ ಎತ್ತರ 1720 ಅಡಿ. ಅದರಿಂದ ವಿದ್ಯುತ್‌ಶಕ್ತಿ ಕೂಡ ಉತ್ಪಾದನೆಯಾಗುತ್ತದೆ. ಕೋಲಾರದ ಹತ್ತಿರ ಒಂದು ಜಾಕ್‌ವಲ್ ತೆಗೆದು ಅದರಿಂದ ಬಿಜಾಪುರ ಉತ್ತರ ಭಾಗದ 5 ತಾಲೂಕಿನಲ್ಲೇ ಅತಿ ಎತ್ತರದಲ್ಲಿರುವ ಮುಳುವಾಡದಲ್ಲಿ ಟ್ಯಾಂಕ ಕಟ್ಟಿ ನೀರು ಪಂಪು ಮಾಡಿದರೆ 5 ತಾಲೂಕುಗಳಿಗೆ ಸಹಜವಾಗಿಯೇ ನೀರು ಒದಗಿಸಬಹುದಾಗಿದೆ. ಈಗ ಬಳೂತಿಯಿಂದ ಮಲಘಾಣ ಅಲ್ಲಿಂದ ಮುಳುವಾಡಕ್ಕೆ ನೀರು ಪಂಪು ಮಾಡಿ ಬಿಜಾಪುರ ನಗರಕ್ಕೆ ಪೂರೈಸಲಾಗುತ್ತಿದೆ. ಬಳೂತಿಯ ಬದಲಾಗಿ ಕೋಲಾರದಿಂದ ಮಲಘಾಣ ಅಲ್ಲಿಂದ ಮುಳವಾಡಕ್ಕೆ ನೀರು ಪಂಪು ಮಾಡಿದರೆ 5 ತಾಲೂಕುಗಳಿಗೆ ನೀರು ಪೂರೈಸಬಹುದು.

ಮುಳವಾಡ 2053ಅಡಿ. 127ಅಡಿ ಎತ್ತರಕ್ಕೆ ಎರಡು ಕಡೆ ಕೋಲಾರ ಮತ್ತು ಮಲಘಾಣ ನೀರು ಪಂಪು ಮಾಡಿದರೆ ಮುಳವಾಡಕ್ಕೆ ಬರುತ್ತದೆ. ಬಿಜಾಪುರದ ಎತ್ತರ 1944, ಇಂಡಿ 1590, ಸಿಂದಗಿ 1675, ತಾಳಿಕೋಟೆ 1632, ಬಸವನಬಾಗೇವಾಡಿ 1885, ಆಲಮಟ್ಟಿಯಿಂದ ಹೊರ್ತಿಯ ವರೆಗೆ 1680 ಅಡಿ ಎತ್ತರದಲ್ಲಿ ಕೊಂಟೋರ್ ಕಾಲುವೆ ತೆಗೆಯುವ ಯೋಜನೆ ಕೂಡ ಒಳಗೊಂಡಿದೆ. ಇದರಿಂದಾಗಿ ಡೋಣಿ ನದಿಯಲ್ಲಿ ಸದಾಕಾಲವೂ ನೀರು ನಿಲ್ಲುತ್ತದೆ. ಹಾಗಾದಲ್ಲಿ ಡೋಣಿ ನದಿಯ ಉಪ್ಪಿನಂಶವೂ ಹೋಗುತ್ತದೆ. ಆ ನೀರನ್ನು ಯಾತ ನೀರಾವರಿಗಾಗಿ ಉಪಯೋಗಿಸಬಹುದಾಗಿದೆ.

ಮುಳುವಾಡ ಯಾತ ನೀರಾವರಿಯಾದರೆ ರೈತರಿಗೆ ನೀರು ಸಿಗುವುದಲ್ಲದೆ, ಬಿಜಾಪುರ ಹಾಗೆಯೇ ಇತರ ತಾಲೂಕ ಕೇಂದ್ರಗಳ ಕುಡಿಯುವ ನೀರಿನ ಸಮಸ್ಯೆಯನ್ನೂ ಬಗೆಹರಿಸಬಹುದಾಗಿದೆ.

ಐದು ನದಿ ಹರಿಯುತ್ತಿದ್ದರೂ ಬಿಜಾಪುರ ಜಿಲ್ಲೆ ಬರಗಾಲದ ಬವಣೆಯಿಂದ ಪಾರಾಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳೇ ಅದಕ್ಕೆ ಪೂರ್ಣ ಹೊಣೆಗಾರರಾಗಿದ್ದಾರೆ. ಆಲ್‌ಮಟ್ಟಿ ಯೋಜನೆಯನ್ನು ಯಾವ ರೀತಿ ಕಡೆಗಣಿಸಲಾಗುತ್ತಿದೆಯೋ ಹಾಗೆಯೇ ಮುಳುವಾಡ ಯಾತ ನೀರಾವರಿ ಯೋಜನೆಯನ್ನೂ ಮಲತಾಯಿ ಧೋರಣೆಯಿಂದ ನೋಡಲಾಗುತ್ತಿದೆ. ಆರಿಸಿ ಹೋದ ಶಾಸಕರೂ, ಲೋಕಸಭಾ ಸದಸ್ಯರೆಲ್ಲಾ ಜಿಲ್ಲೆಯ ಜೀವಂತ ಸಮಸ್ಯೆಯತ್ತ ಗಮನ ಹರಿಸದಿರುವುದರಿಂದ ಜಿಲ್ಲೆ ಬರಗಾಲದ ತವರು ಮನೆಯಾಗಿಯೇ ಉಳಿದಿದೆ.

ಬಾಗಲಕೋಟೆಯ ರಾಜಕಾರಣಿಗಳಿಂದಾಗಿ ಆಲಮಟ್ಟಿ ಯೋಜನೆ ಯಾವ ರೀತಿ ನನೆಗುದಿಗೆ ಬಿದ್ದಿತ್ತೋ, ಈಗ ಯಾತ ನೀರಾವರಿ ಕೂಡ ಕೆಲವು ಶಾಸಕರ ಒತ್ತಡಕ್ಕೆ ಬಲಿ ಬಿದ್ದು ಕುಂಠಿತಗೊಂಡು 5 ತಾಲೂಕುಗಳಿಗೆ ಫಲನೀಡದಂತಾಗುವ ಸಂಭವವಿದೆ. ಮುಳುವಾಡದ ಬದಲಾಗಿ ಮಲಘಾಣದ ಹತ್ತಿರ ನೀರಿನ ಟ್ಯಾಂಕ ಕಟ್ಟಿಸಬೇಕೆಂಬ ಪ್ರಯತ್ನ ನಡೆದಿದೆಯಂತೆ.

ದೇಶದ, ರಾಜ್ಯದ, ಜಿಲ್ಲೆಯ ಅಭಿವೃದ್ಧಿಯ ಕೆಲಸದಲ್ಲಿ ರಾಜಕಾರಣ ಅಡ್ಡಿಬರಬಾರದು. ಅಂಥ ತಂತ್ರಗಳನ್ನು ವಿರೋಧಿಸಬೇಕು. ಅಂಥ ರಾಜಕಾರಣಿಗಳಿಗೆ ಬಹಿಷ್ಕಾರ ಹಾಕಬೇಕು.

ಆಲಮಟ್ಟಿ ಮತ್ತು ಮುಳುವಾಡ ಯೋಜನೆಗಳು ಕಾರ್ಯಗತವಾದರೆ ಬಿಜಾಪುರ ಜಿಲ್ಲೆ ಎರಡನೇ ಪಂಜಾಬಾಗುವುದರಲ್ಲಿ ಸಂಶಯವಿಲ್ಲ. ನಾನಾತರದ ಬೆಳೆಗಳಷ್ಟೆ ಅಲ್ಲಾ, ಒಕ್ಕಲತನಕ್ಕೆ ಸಂಬಂಧಪಟ್ಟ ಕೈಗಾರಿಕೆಗಳೂ ಬೆಳೆಯುತ್ತವೆ, ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಯುತ್ತಿದೆ. ಬರಗಾಲ ಇಲ್ಲದಂತಾಗುತ್ತದೆ.

1964 ರಲ್ಲಿ ಆಲಮಟ್ಟಿ ಯೋಜನೆಯ ಖರ್ಚು ಬರೇ 56 ಕೋಟಿ ರೂ. ಇತ್ತು. ಈಗ ಅದು 3000 ಕೋಟಿಯಷ್ಟಾಗಿದೆ. ಈಗ ಮುಳುವಾಡ ಯೋಜನೆಯ ಅಂದಾಜು ವೆಚ್ಚ 400 ಕೋಟಿ. ತಡ ಮಾಡಿದರೆ ಅದು ಎಷ್ಟಾಗುತ್ತದೆಂದು ಹೇಳುವುದು ಕಷ್ಟ.

ಆಲಮಟ್ಟಿ ಜೊತೆಯಲ್ಲಿ ಮುಳುವಾಡ ಯಾತ ನೀರಾವರಿ ಯೋಜನೆಯನ್ನು ಕೂಡಲೇ ಕೈಗೊಳ್ಳಬೇಕೆಂದು ಎಲ್ಲರೂ ಒತ್ತಾಯ ಮಾಡಬೇಕು. ಬಲವಾದ ಚಳುವಳಿ ಹೂಡಬೇಕು.

ಮಾಲಕರ, ಗುಂಡಾಗಳ ದಬ್ಬಾಳಿಕೆ

ಬೆಂಗಳೂರು ನಗರದ ವೈಟ್‌ಫಿಲ್ಡ ಕೈಗಾರಿಕ ಕೇಂದ್ರದಲ್ಲಿರುವ ಸಿಪಾನಿ ಫೈಬರ್ಸ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಸಿ.ಐ.ಟಿ.ಯ ನೇತೃತ್ವದಲ್ಲಿ ಹಲವಾರು ಹೋರಾಟಗಳನ್ನು ನಡೆಸಿ ಜಯಗಳಿಸಿದ್ದಾರೆ. ಕಾರ್ಮಿಕರ ಐಕ್ಯತೆಯನ್ನು ಸಹಿಸಲಾರದ ಮಾಲಿಕರು ಗುಂಡಾಜನರನ್ನು ಪಾಲಿಸಿ ಅವರ ಸಹಾಯದಿಂದ ಕೆಲಸಗಾರರ ಮೇಲೆ ದಬ್ಬಾಳಿಕೆ, ಗೂಂಡಾಗಿರಿ ನಡೆಸಿ ಅವರಲ್ಲಿ ಒಡಕುಂಟು ಮಾಡಲು ಪ್ರಯತ್ನ ನಡೆಸಿದ್ದಾರೆ.

10-6-86ರಂದು ಮಾಲಿಕರು 30 ಗೂಡಾಜನರನ್ನು ತಂದು ಸಿ.ಐ.ಟಿ.ಯು ಸಂಘವನ್ನು ಬಿಡದಿದ್ದರೆ ಎಲ್ಲರನ್ನು ಕೊಲೆ ಮಾಡಲಾಗುವುದೆಂದು ಅಂಜಿಸಿದ್ದಾರೆಂದು ಬೆಂಗಳೂರು ದಕ್ಷಿಣ ಕೈಗಾರಿಕಾ ಕೆಲಸಗಾರ ಸಂಘದ ಕಾರ್ಯದರ್ಶಿಯವರಾದ ಎ. ಎಂ. ಜಾನ್ ವಿನ್‌ಸೆಂಟ ಅವರು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕೃಷ್ಣಪ್ಪ ಮತ್ತು ಗಜೇಂದ್ರ ಎಂಬಿಬ್ಬರನ್ನು ಗುಂಡಾಜನರ ಸಹಾಯದಿಂದ ಮಾಲಿಕರು ಹೊಡೆದು, ಅವರನ್ನು ನಾಪತ್ತೆ ಮಾಡಿದ್ದಾರೆ. ಹೆಂಗಸರ ಮಕ್ಕಳ ಮೇಲೂ ಗೂಂಡಾಗಿರಿ ನಡೆಸಲಾಗುತ್ತಿದೆ. ಸತ್ಯಾಗ್ರಹ ನಡೆಸುತ್ತಿದ್ದ ಟೆಂಟನ್ನು ಕೂಡ ನಾಶಮಾಡಲಾಗಿದೆ. ಆದರ ವಿರುದ್ಧ ಕೆಲಸಗಾರರು ಮೆರವಣಿಗೆಯಲ್ಲಿ ಮಹಾದೇವಪುರ ಪೋಲೀಸ್‌ಸ್ಟೇಶನಿಗೆ ಹೋಗಿ ಮಾಲಿಕರಾದ ಸುಂದರಲಾಲ್ ಮತ್ತು ರಾಜಕುಮಾರ ಹಾಗೆಯೇ 30 ಗುಂಡಾಗಳ ವಿರುದ್ಧ ಲಿಖಿತ ಆರೋಪ ದಾಖಲ ಮಾಡಿದ್ದಾರೆ. ಪೋಲೀಸರ ಸಮಕ್ಷಮವೇ ಕೆಲಸಗಾರರ ಮೇಲೆ ಅತ್ಯಾಚಾರ ನಡೆದಾಗ ಆ ಪೋಲೀಸರು ನಿಶ್ಚಿಂತರಾಗಿದ್ದರೆಂದೂ ತಕರಾರು ಮಾಡಿದ್ದಾರೆ. ಮಾಲಿಕರನ್ನೂ, ಗುಂಡಾಜನರನ್ನೂ ಕೂಡಲೇ ಬಂಧಿಸಿ ಕಾರ್ಖಾನೆಯ ಕಾರ್ಮಿಕರಿಗ ರಕ್ಷಣೆ ನೀಡಬೇಕೆಂದು ಜಾನ್‌ವಿನ್‌ಸೆಂಟ್ ಪೋಲೀಸರನ್ನು ಒತ್ತಾಯಿಸಿದ್ದಾರೆ.

ಸಿ. ಪದ್ಮನಾಭನ್, ಪ್ರ. ಕಾರ್ಯದರ್ಶಿ, ಸೋರಿ ಮತ್ತು ನ್ಯಾಯ್ಯರ್ ಎಂಪ್ಲಾಯೀಸ್ ಯೂನಿಯನ್, ಸಿ. ಕುಂಜಪ್ಪನ್, ಕನ್‌ವೀನರ್, ಕೆ. ಆರ್. ಪುರ ಸಿ.ಐಟಿ.ಯು ಸಮನ್ವಯ ಸಮಿತಿ, ಮತ್ತು ಪ್ರ. ಕಾರ್ಯದರ್ಶಿ ಅಲ್ಫ್ರಡ್ ಹರ್ಬರ್ಟ್ ಇಂಡಿಯಾ ಕೆಲಸಗಾರರ ಸಂಘ, ಮೊದಲಾದ ಕಾರ್ಮಿಕ ಸಂಘಟನೆಗಳು, ಸಿಪಾನಿ ಫೈಬರ್ಸ್ ಕಾರ್ಮಿಕರ ಮೇಲೆ ನಡೆದಿರುವ ದಬ್ಬಾಳಿಕೆಯನ್ನು ಖಂಡಿಸಿ ಮಾಲಿಕರನ್ನು ಬಂಧಿಸಬೇಕೆಂದು ಕೇಳಿಕೊಂಡಿವೆ. ಕಾರ್ಮಿಕರು ಮೆರವಣಿಗೆ ತೆಗೆದು ಮಾಲಿಕರನ್ನು ಬಂಧಿಸಬೇಕೆಂದು ಒತ್ತಾಯಿಸಿದ್ದಾರೆ. ಕಾರ್ಮಿಕರ ಒತ್ತಡಕ್ಕೆ ಮಣಿದು ಪೋಲೀಸರು ಮಾಲಿಕರನ್ನು ಬಂಧಿಸಿ ಕೋರ್ಟಿನಲ್ಲಿ ಹಾಜರ ಪಡಿಸಿದ ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಗುಂಡಾಜನರು ಥಳಿಸಿ ಓಡಿಸಿಕೊಂಡು ಹೋಗಿದ್ದ ಇಬ್ಬರು ಕಾರ್ಮಿಕರೂ ಅವರಿಂದ ತಪ್ಪಿಸಿಕೊಂಡು ಬಂದಿದ್ದಾರೆ.

ಫ್ಯಾಸಿಸ್ಟರನ್ನು ಮಣ್ಣು ಮುಕ್ಕಿಸಿದವರು ಸೋ

ಜೂನ್ 22, 1941. 22 ತಿಂಗಳ ಹಿಂದೆ ಆಗಸ್ಟ್ 1939 ರಲ್ಲಿ ತನ್ನದೇ ಕೇಳಿಕೆಯ ಮೇರೆಗೆ ಸೋವಿಯತ್ ಒಕ್ಕೂಟದೊಂದಿಗೆ ಮಾಡಿಕೊಂಡ ಅನಾಕ್ರಮಣ ಒಪ್ಪಂದವನ್ನು ಮುರಿದು ಯುದ್ಧವನ್ನು ಘೋಷಿಸದೆಯೇ ಹಿಟ್ಲರ್ ಸೋವಿಯತ್ ಒಕ್ಕೂಟದ ವಿರುದ್ಧ 190 ತುಕಡಿಗಳು, ನಾಲ್ಕು ಸಾವಿರ ಟ್ಯಾಂಕುಗಳು, ಐದುಸಾವಿರ ಯುದ್ಧ ವಿಮಾನಗಳು ಹಾಗೂ 200 ಯುದ್ಧ ಹಡಗುಗಳೊಂದಿಗೆ ಜಗತ್ತು ಹಿಂದೆಂದೂ ಕಂಡು ಕೇಳದ ಅಗಾಧ ಪರಿಮಾಣದ ಆಕ್ರಮಣ ಆರಂಭಿಸಿದ. 90 ಲಕ್ಷ ಸೈನಿಕರು ಈ ಯುದ್ಧದಲ್ಲಿ ನಿರತರಾಗಿದ್ದಾರೆಂದು ಹಿಟ್ಲರನೇ ಕೊಚ್ಚಿಕೊಂಡ. 1940 ರ ಡಿಸೆಂಬರ್‌ನಲ್ಲಿ ಫ್ಯಾಸಿಸ್ಟರು ತಯಾರಿಸಿದ್ದ "ಬಾರ್ಬರೋಸಾ ಯೋಜನೆ" ಈ ರೀತಿ ಜ್ಯಾರಿಯಾಗಲಾರಂಭಿಸಿತು. ಆದರೆ ಇದರೊಂದಿಗೆ ಫ್ಯಾಸಿಸ್ಟರನ್ನು ಸಂಪೂರ್ಣವಾಗಿ ಮಣ್ಣು ಮುಕ್ಕಿಸಿದ ಸೋವಿಯತ್ ಜನತೆಯ ಚಾರಿತ್ರಿಕ "ಮಹಾನ್ ದೇಶಾಭಿಮಾನೀ ಯುದ್ಧ" ಕೂಡಾ ಆರಂಭಗೊಂಡಿತು ಎಂಬುದು ಮಾತ್ರ ಹಿಟ್ಲರ್‌ನಿಗಾಗಲೀ ಅವನನ್ನು ನೇರವಾಗಿಯೋ ಪರೋಕ್ಷವಾಗಿಯೋ ಪೋಷಿಸುತ್ತಾ ಬಂದಿದ್ದ ಪ್ರತಿಗಾಮೀ ಬಂಡವಾಳಶಾಹಿಗಳಿಗಾಗಲೀ ತಿಳಿದಿರಲಿಲ್ಲ.

ಸೋವಿಯತ್ ಒಕ್ಕೂಟದ ಎಂಟು ವರ್ಷಗಳ ಫ್ಯಾಸಿಸ್ಟ್ ವಿರೋಧಿ ಶಾಂತಿ ಪ್ರಯತ್ನಗಳನ್ನು ಪಾಶ್ಚಿಮಾತ್ಯ ಬಂಡವಾಳಶಾಹೀ ದೇಶಗಳು ತಮ್ಮ ಕುರುಡು ಕಮ್ಯುನಿಸ್ಟ್ ವಿರೋಧ ಹಾಗೂ ಸೋವಿಯತ್ ವಿರೋಧದಿಂದಾಗಿ ವಿಫಲಗೊಳಿಸಿ, ಸಮಾಜವಾದೀ ಸೋವಿಯತ್ ಒಕ್ಕೂಟವನ್ನು ಬಗ್ಗುಬಡಿಯುವ ದುರುದ್ದೇಶಪೂರ್ಣ ಹಾಗೂ ಸಮಯಸಾಧಕ ನೀತಿಯಿಂದ ಅವರು ಪೋಷಿಸಿ ಬೆಳೆಸಿದ ಬರ್ಬರ ನಾಝಿ ದ್ವಿತೀಯ ಮಹಾಯುದ್ಧದ ಮೊದಲ 22 ತಿಂಗಳಲ್ಲಿ ಆದಾಗಲೇ ಆಸ್ಟ್ರಿಯಾ, ಜೆಕೋಸ್ಲೊವಾಕಿಯಾ, ಅಲ್ಬೇನಿಯಾ, ಪೋಲಂಡ್, ಡೆನ್ಮಾರ್ಕ್ ನಾರ್ವೆ, ಲಕ್ಸೆಂಬರ್ಗ್, ಹಾಲಂಡ್, ಬೆಲ್ಜಿಯಂ, ಫ್ರಾನ್ಸ್, ಯುಗೋಸ್ಲಾವಿಯಾ ಹಾಗೂ ಗ್ರೀಸ್ ದೇಶಗಳನ್ನು ಆಕ್ರಮಿಸಿಕೊಂಡು, ನಂತರ "ಬ್ಲಿಟ್ಸ್‌ಕ್ರೀಗ್" (ಮಿಂಚಿನ ಆಕ್ರಮಣ) ವಿಧಾನದ ಮೂಲಕ 8-10 ವಾರಗಳಲ್ಲಿ ಸಮಾಜವಾದೀ ಸೋವಿಯತ್ ಒಕ್ಕೂಟವನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲು ತಯಾರಿಸಿಕೊಂಡಿದ್ದ ವಿಸ್ತೃತ ಯೋಜನೆಯಾಗಿತ್ತು ಈ "ಬಾರ್ಬರೋಸಾ ಯೋಜನೆ".

ಆಕ್ರಮಣ ನಡೆದ ಕೂಡಲೇ ಇನ್ನೇನು ಒಂದು ತಿಂಗಳೊಳಗೆ ರಶ್ಯನ್ ಪ್ರತಿರೋಧ ನುಚ್ಚುನೂರಾಗುತ್ತದೆ ಎಂಬ ಅಭಿಪ್ರಾಯ ಬರ್ಲಿನ್, ಲಂಡನ್ ಹಾಗೂ ವಾಶಿಂಗ್ಟನ್‌ನಲ್ಲಿತ್ತು. ಆದರೆ 15 ದಿನ ಕಳೆಯುವಷ್ಟರಲ್ಲಿ ಇದೆಲ್ಲಾ ಬದಲಾಗಲಾರಂಭಿಸಿತು. "ಜರ್ಮನರಿಗೆ ಅವರು ಇದುವರೆಗೆ ಕಂಡಿರದ ಅತ್ಯಂತ ಬಲಶಾಲೀ ಪ್ರತಿರೋಧವನ್ನು ರಶ್ಯನ್ನರು ಒಡ್ಡುತ್ತಿದ್ದಾರೆ" ಎಂಬ ಮೆಲು ದನಿಯ ಉದ್ಗಾರ ವಾಶಿಂಗ್ಟನ್‌ನಲ್ಲಿ ಕೇಳಲಾರಂಭಿಸಿತು. ಲಂಡನ್ನಿನಲ್ಲಿ ಕಮ್ಯುನಿಸಂನ "ಪ್ರಾಚೀನ ಶತ್ರು" ಚರ್ಚಿಲ್ ರಶ್ಯನ್ನರ "ಮಹಾನ್ ಕಾರ್ಯತತ್ಪರತೆ"ಯನ್ನು ಹೊಗಳಲಾರಂಭಿಸಿದರು. "ಸಂಯುಕ್ತ ಯುರೋಪಿ"ನ ಕನಸನ್ನು ನನಸಾಗಿರುವ ಬದಲು ಹಿಟ್ಲರ್ ಯುರೋಪಿನ ಜನ ಸಮೂಹಗಳನ್ನು "ಜರ್ಮನ್ ಜನಾಂಗ"ದನಗ್ಗ ಗುಲಾಮಿಕೆಗೊಳಪಡಿಸಿದ್ದನ್ನು ಕಣ್ಣಾರೆ ಕಂಡ ಯುರೋಪಿನ ವಿವಿಧ ಜನಗಳು "ರಶ್ಯನ್ನರು ಹೊಸ ಬಗೆಯ ವಿಜಯದ ಅವಕಾಶ ತೆರೆದಿದ್ದಾರೆ" ಎಂದು ಅರಿಯಲಾರಂಭಿಸಿದರು. ನಾಝಿ ಸೆರೆಮನೆಯಾಗಿದ್ದ ಯುರೋಪಿನಲ್ಲಿ ಸುತ್ತ ಪ್ರತಿರೋಧ ಆಂದೋಲನಗಳು ಸಕ್ರಿಯವಾಗಲಾರಂಭಿಸಿದವು.

ಹಿಟ್ಲರನ 'ಮಿಂಚಿನ ದಾಳಿ' ರಶ್ಯಾವನ್ನು ಬಗ್ಗುಬಡಿಯುವಲ್ಲಿ ವಿಫಲಗೊಂಡಿತು. "ಮೊತ್ತಮೊದಲಬಾರಿಗೆ ಹಿಟ್ಲರ್ ಒಂದು ಹೊಸ ಆಯಾಮದಲ್ಲಿ ಸೆಣಸಬೇಕಾಗಿ ಬಂದಿದೆ" ಎಂದು ನ್ಯೂಯಾರ್ಕ್ ಟೈಂಸ್ ಪತ್ರಿಕೆಯ ಸಂಪಾದಕೀಯ ಹೇಳಿತು. ಹೌದು. ಮೊತ್ತ ಮೊದಲಬಾರಿಗೆ ಹಿಟ್ಲರ್ ಒಂದು ಸೇನೆಯನ್ನು ಎದುರಿಸುವ ಬದಲು ರಕ್ಷಣೆಗೆ ಸಜ್ಜುಗೊಂಡ ಸಮಸ್ತ ಜನತೆಯನ್ನು ಎದುರಿಸಬೇಕಾಗಿ ಬಂತು. "ರಣರಂಗ ಇರುವುದು ಫಿರಂಗಿಗಳ ಘರ್ಜನೆಯಿರುವಲ್ಲಿ ಮಾತ್ರವಲ್ಲ, ಪ್ರತಿಯೊಂದು ಕಾರ್ಖಾನೆ, ಪ್ರತಿಯೊಂದು ಗದ್ದೆಯೂ ರಣರಂಗ" ಇದು ಸೋವಿಯತ್ ದೇಶದಲ್ಲಿ ಆಗಿನ ಘೋಷಣೆಯಾಗಿತ್ತು.

1418 ದಿನಗಳ ಕಾಲ ಸಮ… ವಾದೀ ಸೋವಿಯೆತ್ ಒಕ್ಕೂ… ವೀರ ಜನತೆ, ಕೆಂಪುಸೇನೆ ಲೆನಿನ್… ಡಿನಲ್ಲಿ, ಮಾಸ್ಕೋದಲ್ಲಿ, ಕುರ್ಸ್… ಸ್ಟಾಲಿನ್‌ಗ್ರಾಡಿನಲ್ಲಿ, ಸೆವಾಸ್ತ್ರೊ… ನಲ್ಲಿ ಎಂತಹ ವೀರಾವೇಶದಿಂದ ಹೊ… ಡಿದರು, ಅಪಾರ ತ್ಯಾಗಬಲಿದಾನ… ನಾಝಿಗಳನ್ನು ತಮ್ಮ ತಾಯ… ನಿಂದ ಹೊಡೆದೋಡಿಸುತ್ತಾ, … ನಾಝಿ ಆಕ್ರಮಿತ ದೇಶಗಳ… ವಿಮೋಚನೆಗೆ ಒಳಿಸುತ್ತಾ ನಾಝಿ… ಗುಹೆಯೊಳಗೇ ಹೊಕ್ಕು 1945 ಮೇ 9 ರಂದು ಬರ್ಲಿನ್‌ನ "ರ… ಸ್ಟಾಗ್" ಮೇಲೆ ಕೆಂಬಾವುಟ ಹ… ಸಿದರು. ಅವರ ಈ ಹೋರಾಟ… ಜಗತ್ತಿನ ಕಾರ್ಮಿಕ ವರ್ಗ, ಫ್ಯಾಸಿ… ವಿರೋಧಿ ಆಂದೋಲಗಳು ಎಂ… ಬೆಂಬಲ ನೀಡಿದರು ಎಂಬುದು "ಐ… ರಂಗ"ದ ಓದುಗರಿಗೆ ಚೆನ್ನಾಗಿ ತಿ… ರುವ ಸಂಗತಿ.

ಸಮಾಜವಾದವನ್ನೇ ನಿರ್ನಾ… ಗೊಳಿಸಬೇಕೆಂಬ ಹಿಟ್ಲರನ ಅ… ಹುಚ್ಚೇರಿದ ಅಮೆರಿಕಾ ನೇತೃತ್ವ… ಸಾಮ್ರಾಜ್ಯಶಾಹಿಗಳು ಮತ್ತೊ… ಮಾನವ ಕುಲವನ್ನು ಯುದ್ಧದ ಬೆಂ… ಎಸೆಯಲು ಯತ್ನಿಸುತ್ತಿದ್ದಾರೆ. ಸಮಾ… ವಾದೀ ದೇಶಗಳ ಸಂಪೂರ್ಣ ಸಹಕಾ… ದೊಂದಿಗೆ ಈ ಯುದ್ಧೋನ್ಮಾದ… ವಿರುದ್ಧ ಹೋರಾಡುತ್ತಿರುವ ಜಗತ್ತಿ… ಶಾಂತಿಪ್ರಿಯ ಶಕ್ತಿಗಳು ಹಾಗೂ ದು… ಯುವ ಜನಸಮೂಹಗಳು ದ್ವಿತೀ… ಮಹಾಯುದ್ಧದ ಕಾರಣ ಹಾಗ… ಪರಿಣಾಮಗಳನ್ನು ಮತ್ತೊಮ್ಮೆ ನೆನ… ಕೊಳ್ಳಬೇಕಾದ ದಿನವಿದು.

ದ್ವಿತೀಯ ಮಹಾಯುದ್ಧಕ್ಕೆ ಯಾರು ಕಾರಣ?

ಆಗಸ್ಟ್ 1939ರಲ್ಲಿ ಸೋವಿಯೆತ್ ಒಕ್ಕೂಟ ಹಾಗೂ ಹಿಟ್ಲರ್ ಜರ್ಮನಿ ನಡುವೆ ನಡೆದ ಅನಾಕ್ರಮಣ ಒಪ್ಪಂದದಿಂದಾಗಿ ಹಿಟ್ಲರ್ ಅದೇ ಸೆಪ್ಟಂಬರ್ 1 ರಂದು ಪೋಲಂಡ್ ಮೇಲೆ ಆಕ್ರಮಣ ನಡೆಸಿದ, ಆದರೊಂದಿಗೆ ದ್ವಿತೀಯ ಮಹಾಯುದ್ಧ ಆರಂಭವಾಯಿತು ಎನ್ನುವುದು ಬಂಡವಾಳಶಾಹಿಗಳ ಹಾಗೂ ಅವರ ಹಸ್ತಕರ ಒಂದು ಸಾಮಾನ್ಯ ಅಪಪ್ರಚಾರ.

ಆದರೆ ಇದಕ್ಕೆ ಹನ್ನೊಂದು ತಿಂಗಳ ಮೊದಲೇ ಅಂದರೆ ಸೆಪ್ಟಂಬರ್ 1938 ರಲ್ಲಿ ಬ್ರಿಟಿಶ್ ಹಾಗೂ ಫ್ರೆಂಚ್ ಸರಕಾರದ ಮುಖ್ಯಸ್ಥರು ಮ್ಯೂನಿಚ್‌ನಲ್ಲಿ ಜರ್ಮನಿ ಹಾಗೂ ಇಟಲಿಯ ಫ್ಯಾಸಿಸ್ಟರೊಂದಿಗೆ ಮಾತುಕತೆ ನಡೆಸಿ ಜೆಕೋಸ್ಲೋವಾಕಿಯಾವನ್ನು ಒಡೆದು ಚೂರಾಗಿಸಿ ಒಂದು ತುಣುಕನ್ನು ಹಿಟ್ಲರನ ಜರ್ಮನಿಗೆ ಕೊಡಲು ನಿರ್ಧರಿಸಿದ್ದರು. ಹಾಗೂ ಈ ಪ್ರಕಾರ ಹಿಟ್ಲರ್‌ನ ನಾಝೀ ಮುಂದೆ ಜೆಕೋಸ್ಲೊವಾಕಿಯಾವನ್ನು ಆಕ್ರಮಿಸಿಕೊಂಡಾಗ ಅದಾಗಲೇ ಒಂದು ವಾರದ ಹಿಂದೆ ಬ್ರಿಟಿಶ್ ಹಣಕಾಸು ಬಂಡವಳಿಗರು ಜೆಕೊಸ್ಲೋವಾಕಿಯಾದಲ್ಲಿ ಜರ್ಮನ್ ಕೈಗಾರಿಕೆಯಲ್ಲಿ ಹಣ ತೊಡಗಿಸಲು ಒಪ್ಪಿದ್ದರು ಎನ್ನುವುದನ್ನು ಮರೆಮಾಚಲಾಗುತ್ತಿದೆ. ಅಷ್ಟೇ ಅಲ್ಲ, ಅದೇ ತಿಂಗಳಲ್ಲಿ ಹಿಟ್ಲರ್ ಜರ್ಮನಿ ಮತ್ತು ಬ್ರಿಟನ್ ಹಾಗೂ ಹಿಟ್ಲರ್ ಜರ್ಮನಿ ಮತ್ತು ಫ್ರಾನ್ಸ್ ನಡುವೆ ಪರಸ್ಪರ ಒಪ್ಪಂದಗಳೂ ನಡೆದವು. ಹಿಟ್ಲರ್ ಜೆಕೊಸ್ಲೊವಾಕಿಯನ್ನು ಆಕ್ರಮಿಸಿಕೊಂಡಾಗ ಸೋವಿಯೆತ್ ಒಕ್ಕೂಟ ನೀಡಿದ ನೆರವನ್ನು ನಿರಾಕರಿಸುವಂತೆ ಜೆಕೊಸ್ಲೋವಾಕಿಯಾದ ಅಧ್ಯಕ್ಷ ಬೆನೆಸ್‌ರವರ ಮೇಲೆ ಬ್ರಿಟನ್ ಹಾಗೂ ಫ್ರಾನ್ಸ್ ಒತ್ತಡ ತಂದವು. ಪರಸ್ಪರ ಮೈತ್ರಿ ಒಪ್ಪಂದದ ಸೋವಿಯೆತ್ ಪ್ರಾವನ್ನು ಪೋಲಂಡಿನ ಆಗಿನ ಪ್ರತಿಗಾಮಿ ಸರಕಾರ ನಿರಾಕರಿಸಿತು,

ಇದಕ್ಕೆ ಮೊದಲು 1932 ರಲ್ಲಿ ಜಪಾನ್ ಮಂಚೂರಿಯಾವನ್ನು ಆಕ್ರಮಿಸಿಕೊಂಡಾಗ, ನಾಝೀ ಜರ್ಮನಿ ಸ್ಪೈನ್‌ನಲ್ಲಿ ಅಂತಯುರ್ದ್ಧಕ್ಕೆ ಕುಮ್ಮಕ್ಕು ನೀಡಿದಾಗ, ಇಟಲಿಯ ಫ್ಯಾಸಿಸ್ಟರು ಇಥಿಯೋಪಿಯಾವನ್ನು ಹಾಗೂ ನಾಝಿಗಳು ಆಸ್ಟ್ರಿಯಾವನ್ನು ಆಕ್ರಮಿಸಿಕೊಂಡಾಗ ಬ್ರಿಟಿಶ್, ಫ್ರೆಂಚ್ ಹಾಗೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು "ತಟಸ್ಥತೆ"ಯ ಸೋಗಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳಿಗೆ ಪ್ರೋತ್ಸಾಹ ನೀಡಿದರು. ಆ ಸಂದರ್ಭಗಳಲ್ಲಿ ಆಕ್ರಮಣಕ್ಕೊಳಗಾದ ದೇಶಗಳಿಗೆ ನೇರನೆರವು ನೀಡಿದ್ದು ಕೇವಲ ಸೋವಿಯೆತ್ ಒಕ್ಕೂಟ ಮಾತ್ರ. ಬ್ರಿಟಿಶ್, ಫ್ರೆಂಚ್ ಹಾಗೂ ಅಮೇರಿಕಾದ ಸಾಮ್ರಾಜ್ಯಶಾಹಿಗಳ ಇಂತಹ ನಿಲುವಿನಿಂದಾಗಿ ಪೋಷಣೆ ಪಡೆದು ಬೆಳೆದ ನಾಝಿಗಳು ಹಾಗೂ ಇಟಲಿಯ ಫ್ಯಾಸಿಸ್ಟರು ಯುರೋಪನ್ನೆಲ್ಲಾ ತಮ್ಮ ಮಿಲಿಟರಿ ಬೂಟುಗಾಲುಗಳಿಂದ ತುಳಿಯಲಾರಂಭಿಸಿದಾಗ ಬ್ರಿಟನ್ ಹಾಗೂ ಫ್ರಾನ್ಸ್‌ನಲ್ಲಿ ಜನಗಳಿಂದ ಸೋವಿಯೆತ್ ಒಕ್ಕೂಟದೊಂದಿಗೆ ಹಿಟ್ಲರ್ ವಿರುದ್ಧ ಮೈತ್ರಿ ಮಾಡಿಕೊಳ್ಳಬೇಕೆಂದು ಒತ್ತಾಯ ಬರಲಾರಂಭಿಸಿತು. ಸೋವಿಯೆತ್ ಒಕ್ಕೂಟ ಹಿಟ್ಲರ್ ಅಧಿಕಾರಕ್ಕೆ ಬಂದಂದಿನಿಂದಲೇ ಇಂತಹ ಮೈತ್ರಿಯ ಆಹ್ವಾನ ನೀಡುತ್ತಾ ಬಂದಿತ್ತು. ಆದರೂ ಬ್ರಿಟಿಶ್ ಹಾಗೂ ಫ್ರೆಂಚ್ ಸಾಮ್ರಾಜ್ಯಶಾಹಿಗಳು ಈ ಬಗ್ಗೆ ಕಾಯುತ್ತಾ ಹಿಟ್ಲರನ ಹಾಗೂ ಜಪಾನಿನ ಮಿಲಿಟರಿ ಶಾಹಿಗಳ ಮೂಲಕ ಸೋವಿಯತ್ ಒಕ್ಕೂಟವನ್ನು ಸುತ್ತುವರೆಯಲು ಯೋಚಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಲಾದಾಗಷ್ಟೇ ಇಂತಹ ಕುತಂತ್ರಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಜರ್ಮನಿಯೊಂದಿಗೆ ಅನಾಕ್ರಮಣ ಸಂಧಿಗೆ ಒಪ್ಪಿಕೊಂಡಿತು.

ದ್ವಿತೀಯ ಮಹಾಯುದ್ಧ ಆರಂಭಿಸಲು ಹಿಟ್ಲರನಿಗೆ ಪ್ರೋತ್ಸಾಹ ನೀಡುತ್ತಾ ಬಂದವರು ಯಾರು ಮತ್ತು ಅದನ್ನು ತಡೆಯಲು ಸರ್ವಪ್ರಯತ್ನ ನಡೆಸಿದವರು ಯಾರು ? ಉತ್ತರ ಸುಸ್ಪಷ್ಟ.

ಸಾಮಾನ್ಯ ಯುದ್ಧವಲ್ಲ

"ಫ್ಯಾಸಿಸ್ಟ್ ಜರ್ಮನಿಯೊಂದಿಗೆ ಯುದ್ಧ ಎರಡು ಸೇನೆಗಳ ನಡುವಿನ ಒಂದು ಸಾಮಾನ್ಯ ಯುದ್ಧವೆಂದು ಪರಿಗಣಿಸುವಂತಿಲ್ಲ. ಅದು ಒಂದು ಜರ್ಮನ್ ಫ್ಯಾಸಿಸ್ಟ್ ಸೇನೆಯ ವಿರುದ್ಧ ಸಮಸ್ತ ಸೋವಿಯೆತ್ ಜನತೆಯ ಒಂದು ಮಹಾನ್ ಯುದ್ಧ ಕೂಡಾ. ಜನತೆಯ ಈ ದೇಶಪ್ರೇಮೀ ಯುದ್ಧದ ಉದ್ದೇಶ ನಮ್ಮ ದೇಶದ ಮೇಲೆ ತೂಗುತ್ತಿರುವ ಅಪಾಯವನ್ನು ತಪ್ಪಿಸಲೋಸುಗ ಮಾತ್ರವೇ ಅಲ್ಲ, ಜರ್ಮನ್ ಫ್ಯಾಸಿಸಂನ ನೊಗಡಡಿ ನರಳುತ್ತಿರುವ ಎಲ್ಲಾ ಯುರೋಪಿಯನ್ ಜನತೆಗಳ ನೆರವಿಗಾಗಿ ಕೂಡಾ. ಈ ವಿಮೋಚನಾ ಯುದ್ಧ ನಾವು ಒಂಟಿಯಾಗಿಲ್ಲ. ಈ ಯುದ್ಧದಲ್ಲಿ ಹಿಟ್ಲರ್ ವಾದೀ ದುರಾಡಳಿತಗಾರರಿಂದ ಗುಲಾಮಗಿರಿಗೊಳಗಾದ ಜರ್ಮನ್ ಜನತೆಯೂ ಸೇರಿದಂತೆ ಯುರೋಪು ಹಾಗೂ ಅಮೇರಿಕಾದ ಎಲ್ಲ್ ಜನಗಳಲ್ಲೂ ಮಿತ್ರರನ್ನು ಪಡೆಯುತ್ತೇವೆ. ನಮ್ಮ ತಾಯ್ನಾಡಿನ ರಕ್ಷಣೆಯ ನಮ್ಮ ಯುದ್ಧ ಯುರೋಪು ಹಾಗೂ ಅಮೇರಿಕ್‌ದ ಜನ ಸಮೂಹಗಳ ಸ್ವಾತಂತ್ರ್ಯದ, ಪ್ರಜಾಪ್ರಭುತ್ವ ಹಕ್ಕುಗಳ ಹೋರಾಟದೊಂದಿಗೆ ಐಕ್ಯಗೊಳ್ಳುತ್ತದೆ"

— ಜುಲೈ 3, 1941 ರಂದು ಕಾಮ್ರೇಡ್ ಸ್ಟಾಲಿನ್ ಕೆಂಪು ಸೇನೆ ಹಾಗೂ ಕೆಂಪು ನಾವಿಕ ಸೇನೆಯನ್ನುದ್ದೇಶಿಸಿ ಮಾಡಿದ ರೇಡಿಯೋ ಭಾಷಣದಿಂದ.

...ರಾಜ್ಯಶಾಹಿಗಳ ಕೈಗಳನ್ನೂ ತಡೆಯಬಲ್ಲರು

...ಸೋವಿಯತ್ ಜನತೆಯ ಹಾಗೂ ...ಪು ಸೇನೆಯ ಧೀರ ಹೋರಾಟ ...ತ್ಯಾಗ, ಬಲಿದಾನ ಏಷ್ಯಾ ಹಾಗೂ ...ುರೋಪಿನ ಹಲವಾರು ಜನತಾ ...ಜಾಪ್ರಭುತ್ವ ಕ್ರಾಂತಿಗಳ ಮತ್ತು ...ಷ್ಟ್ರೀಯ ವಿಮೋಚನಾ ಆಂದೋಲನ ... ವಿಜಯಕ್ಕೆ ನೆರವಾದಂತೆ ಭಾರತ ...ತ್ತು ಬ್ರಿಟನ್ ಕೂಡಾ ಸೇರಿದಂತೆ ...ಲವಾರು ಇತರ ದೇಶಗಳನ್ನು ನಾಝಿ ...ರ ದಮನದ ಸಾಧ್ಯತೆಯಿಂದಪಾರು ...ಾಡಿತು ಎಂಬುದು ಬಹುಶ: ಬಹಳ ...ನಕ್ಕೆ ತಿಳಿದಿಲ್ಲ.

ನಾಝೀ "ಯುದ್ಧಯಂತ್ರ"ದ ...ೋಜನೆ ಪ್ರಕಾರ ಬಾರ್ಬರೊಸಾ ಯೋಜನೆಯಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡ ನಂತರ ಆಫ್ರಿಕಾ, ಏಷ್ಯಾದ ಬ್ರಿಟಿಶ್ ವಸಾಹತುಗಳನ್ನು ಕಬಳಿಸಿಕೊಂಡು ಬ್ರಿಟನ್ನಿನ

ಭಾರತವನ್ನು ಕಬಳಿಸಬೇಕೆಂದಿದ್ದ ಹಿಟ್ಲರ್

ಮೇಲೆ ಆಕ್ರಮಣ ನಡೆಯಬೇಕಾಗಿತ್ತು ನಂತರ ಅಮೇರಿಕಾ ದೇಶದೊಡನೆ ಘರ್ಷಣೆ.

1941ರ ಫೆಬ್ರುವರಿ 17 ರಂದು ಹಿಟ್ಲರ್ ತನ್ನ ಸೇನೆಗೆ ನೀಡಿನ ನಿರ್ದೇಶನದ ಪ್ರಕಾರ ಸೋವಿಯತ್ ಒಕ್ಕೂಟದ ಪತನದ ನಂತರ ನಾಝೀ ಪಡೆಗಳು ಅಫಘಾನಿಸ್ತಾನದ ಮೂಲಕ ಭಾರತದತ್ತ ಮುಂದೊತ್ತಬೇಕು. ಭಾರತವನ್ನು "ಇತಿಹಾಸದ ಅಭೂತಪೂರ್ವ ಹೊಸ ಸಾಮ್ರಾಜ್ಯ"ದ "ಮಾಂತ್ರಿಕ ಕೇಂದ್ರ"ವೆಂದು ಪರಿಗಣಿಸಬೇಕೆಂದು ಆತ ನಿರ್ದೇಶಿಸಿದ್ದ !

1941ರ ಅಂತ್ಯದಲ್ಲಿ ನಾಝೀ ವಿದೇಶಾಂಗ ಮಂತ್ರಿಯನ್ನು ಭೇಟಿ ಮಾಡಿದ ಜಪಾನಿರಾಯಭಾರಿಹಿರೋಶಿ ಬಿಶೀಮಾ ಜರ್ಮನಿ ಮತ್ತು ಜಪಾನ್ ನಡುವೆ ಪ್ರಭಾವ ವಲಯಗಳ ವಿಂಗಡನೆಯ ಒಂದು ಕರಡು ಯೋಜನೆಯನ್ನು ಸಲ್ಲಿಸಿದ. ಅದರ ಪ್ರಕಾರ ಭಾರತ ಹಿಟ್ಲರ್‌ನ ಆಳ್ವಿಕೆಗೊಳಗಾಗಬೇಕಿತ್ತು.

1942 ಜನವರಿ 18ರಂದು ಜರ್ಮನಿ ಇಟಲಿ ಹಾಗೂ ಜಪಾನ್ ನಡುವೆ ಆದ ಒಪ್ಪಂದದಲ್ಲಿ ಫ್ಯಾಸಿಸ್ಟ ಹಾಗೂ ಜಪಾನೀ ಸೇನೆಗಳ ಕಾರ್ಯವಲಯವನ್ನು ವಿಂಗಡಿಸುವ ರೇಖೆಯೊಂದನ್ನು ಗುರುತಿಸಲಾಯಿತು ಇದು ತಾಷ್ಕೆಂಟಿನಿಂದ ಕಾಬೂಲನ್ನು ಹಾದು ಪಶ್ಚಿಮ ಭಾರತವನ್ನು ಥಾರ್ ಮರುಭೂಮಿಯ ಮಧ್ಯದಿಂದಹಾದುಹೋಗ.ವುದಾಗಿತ್ತು

ಆದರೆ ಕೆಂಪುಸೈನ್ಯ, ಸೋವಿಯತ್ ದೇಶದ ಜನತೆ ಮಾರ್ಶಲ್‌ಸ್ಟಾಲಿನ್‌ರ ಮುಂದಾಳುತ್ವದಲ್ಲಿ ಹಿಟ್ಲರನ ನಾಝಿ ಸೈನ್ಯ ಪುಡಿಪುಡಿಯಾಯಿತು ಪ್ರಖ್ಯಾತ ನಾಝಿ ದಂಡನಾಯಕರು ಓಡಿಹೋಗುವಂತಾಯಿತು, ಹಿಟ್ಲರನ ಸೈನ್ಯದ ಬಹುಪಾಲು ಹೆಣದ ರಾಶಿಯಾಯಿತು. ಲಕ್ಷಾವಧಿ ಸೈನಿಕರೂ ದಂಡನಾಯಕರೂ ಸೆರೆಹಿಡಿಯಲ್ಪಟ್ಟರು.

ಸೋವಿಯತ್ ಜನತೆಯ, ಕೆಂಪು ಸೈನ್ಯದ ಧೀರ ಹೋರಾಟಇದೀ ಮಾನ

(6ನೆಯ ಪುಟಕ್ಕೆ)

ಉತ್ತರ ಫ್ರಾನ್ಸ್‌ನ ನಾರ್ಮಂಡಿಯಿಂದ ಬರ್ಲಿನ್‌ವರೆಗೆ

ವಸಂತ ಕಾಲದ ಇರುಳಿನಲ್ಲಿ ಆಹ್ಲಾ...ಕರ ವಾತಾವರಣ. ಸಮುದ್ರ ತೀರ...ಲ್ಲಿ ವಿಮಾನಗಳಿಂದ ಹಾರಿದ ಪ್ಯಾರಾ...ೂಪರ್‌ಗಳು ಸಾವಿರಾರು ಸಂಖ್ಯೆ...ಲ್ಲಿ ಸದ್ದಿಲ್ಲದೆ ಇಳಿದರು. ತೀರದಿಂದ ...ಳ ಪ್ರದೇಶಕ್ಕೆ ಪ್ರವಾಹದಂತೆ ಮುನ್ನು...ದರು. ಸ್ಥಳ : ಉತ್ತರ ಫ್ರಾನ್ಸ್‌ನ ...ಾರ್ಮಂಡಿ ಎಂಬ ತೀರದ ಪಟ್ಟಣ ...ನಾಂಕ ; ಜೂನ್ 6, 1984

40 ವರ್ಷಗಳ ಹಿಂದೆ ಇದೇ ಜಾಗ...ಲ್ಲಿ ಇದೇ ತಾರೀಖಿಗೆ ನಡೆದ ಕಾರ್ಯಾ...ರಣೆಯ ಪುನರಾವರ್ತನೆ. ವ್ಯತ್ಯಾಸ...ಂದರೆ ಅಂದು ಫಾಸಿಸಂನ ಕಾರ್ಮೋ...ಗಳು ಆವರಿಸಿದ್ದಾಗ ಆಂಗ್ಲೋ-...ಮೇರಿಕನ್ ಪಡೆಗಳು ಯುರೋಪಿ...ಲ್ಲಿ ಕಾಲಿರಿಸಿ ಎರಡನೇ ರಣರಂಗಕ್ಕೆ ...ಂದಿ ಹಾಡಿದ್ದರು. ಇಂದು ರೇಗನ್, ...ಚರ್ ಮತ್ತು ಮಿತ್ತೆರಾಂ ರಂತಹ ...ರು ಸೇರಿದಂತೆ ಸಾವಿರಾರು ಜನ ...ರ್ಮೋದ್ಗಾರ ಮಾಡುವ ಮೂಲಕ ...ಸಿಸ್ಟ್ – ವಿರೋಧಿ ವಿಜಯೋತ್ಸ...ದ 40 ನೇ ವಾರ್ಷಿಕೋತ್ಸವದ ...ರ್ಸ್ಫೂರ್ತಿ ಆಚರಣೆಗೆ ನಾಂದಿ ...ಡಿದರು. ಈ ಸಮಾರಂಭಕ್ಕೆ ...ುರೋಪಿನ ಉದ್ದಗಲಗಳಿಂದ ಬಂದ ...ನ ಸೇರಿದ್ದರು. ಅಣಕು ಕಾರ್ಯಾ...ರಣೆಯಲ್ಲಿ 1944 ರ ನಾರ್ಮಂಡಿ ...ರ್ಯಾಚರಣೆಯಲ್ಲಿ ಸ್ವತಃ ಭಾಗ...ಹಿಸಿದ್ದ ಹಲವು ಮಾಜಿ ಸೈನಿಕರೂ ...ದ್ದರು.

1984 ರ ಜೂನ್ ನಿಂದ ...85 ರ ಮೇ ವರೆಗೆ ವರ್ಷಂ...ರ್ತಿ ಈ ವಿಜಯೋತ್ಸವ ನಡೆಯಿತು. ...ಮದ ರಣರಂಗದಲ್ಲಿ 40 ವರ್ಷಗಳ ...ದೆ ಆಂಗ್ಲೋ – ಅಮೇರಿಕನ್ ಪಡೆ... ನಾರ್ಮಂಡಿಯಿಂದ ಬರ್ಲಿನ್ ...ಗಿನ ಮುನ್ನಡೆಯಲ್ಲಿ ನಿರ್ಣಾಯಕ ...ಟಗಳು, ಇತರ ನೆನಪುಳಿಯುವ ಘಟನೆಗಳ ಅಣಕು ಪುನರಾವರ್ತನೆಗಳು ವಿಜಯೋತ್ಸವದ ಗಮನ ಸೆಳೆಯುವ ಅಂಶವಾಗಿದ್ದವು. ಉದಾಹರಿಸಬಹುದಾದ ಇನ್ನೊಂದು ಇಂತಹ ಅಣಕು ಪುನಾರವರ್ತನೆ ಹಾಲಂಡಿನ ರೋಟರ್ ಡ್ಯಾಂ ಸುತ್ತ ಮುತ್ತ ನಡೆಯಿತು. ಜರ್ಮನ್ ಅಧೀನವಾಗಿದ್ದುದರಿಂದ ಫ್ಯಾಸಿಸ್ಟ ಪಡೆಗಳಿಗೆ ಹಾಲಂಡಿನಲ್ಲಿದ್ದ ಆಹಾರ ಸಾಮಗ್ರಿ ಸರಬರಾಜಾಗುತ್ತಿದ್ದುದರಿಂದ, "ಹಸಿವಿನ ಚಳಿಗಾಲ" ಎಂದು ಕುಪ್ರಸಿದ್ಧವಾದ 1944-45ರ ಕ್ಷಾಮದ ಹಿನ್ನೆಲೆಯ ಘಟನೆ. ಬ್ರಿಟಿಷ್ ಯುದ್ಧ ವಿಮಾನಗಳು, ಹೆಲಿಕಾಪ್ಟರುಗಳು ಹಾಲಂಡಿನ ಮೇಲೆಲ್ಲಾ ಹಾರಾಟ ನಡೆಸಿ ಆಹಾರದ ಪ್ಯಾಕೆಟುಗಳನ್ನು ಸುರಿದವು. ಹಾಲಂಡಿನ ಜನ ತುಲಿಪ್ ಹೂವುಗಳಿಂದ "ವೀರರಿಗೆ ಸ್ವಾಗತ" ಎಂದು ಬರೆದು ಈ "ದಾಳಿ"ಯನ್ನು ಸ್ವಾಗತಿಸಿದರು.

ಈ ಅಣಕು ಪುನರಾವರ್ತನೆಗಳ ವರದಿ ಮತ್ತು ಇತರ ಕಥಾನಕಗಳ ಮೂಲಕ ಪತ್ರಿಕೆ, ರೇಡಿಯೋ, ಟಿ. ವಿ. ಯಂತಹ ಸಮೂಹ ಮಾಧ್ಯಮಗಳು, ಯುರೋಪಿನಲ್ಲಿ ಯುದ್ಧದ ಕೊನೆಯ ವರ್ಷವನ್ನು ಕಣ್ಣಿಗೆ ಕಟ್ಟುವಂತೆ ಪುನರ್ನಿರ್ಮಿಸಿದವು.

ಯುರೋಪಿನ ಜನತೆಗೆ ಈ ವಿಜಯೋತ್ಸವ ವಿಶೇಷ ಮಹತ್ವದ್ದು. ಸೋವಿಯೆಟ್ ಒಕ್ಕೂಟ ಬಿಟ್ಟರೆ ಯುದ್ಧ ಮತ್ತು ಫ್ಯಾಸಿಸ್ಟ ದಮನವನ್ನು ನೇರವಾಗಿ ಅನುಭವಿಸಿದ ಯುರೋಪಿಯನ್ನರು ಇಂತಹ ಯುದ್ಧವಿಲ್ಲದೆ 40 ವರ್ಷ ಕಳೆದೆವಲ್ಲಾ ಎಂದು ಹರ್ಷ ಪಟ್ಟರು. ಆದರೆ ಈ ಉತ್ಸವದಲ್ಲಿ 1944-45 ರ ಅವಧಿಯ ಮೇಲೆ ಒತ್ತು ಹಾಕಿದ್ದು ಸ್ವಲ್ಪ ಆಶ್ಚರ್ಯವೆನಿಸಿತು. ಹಾಗೆನೇ ಆಂಗ್ಲೊ ಅಮೇರಿಕನ್ ಪಡೆಗಳ ಪಾತ್ರದ ಮೇಲೆ ಒತ್ತು ಸಹ. ಫ್ರಾನ್ಸ್, ಇಟಲಿ, ಬೆಲ್ಜಿಯಂ, ಹಾಲಂಡ್ ಮತ್ತಿತರ ದೇಶಗಳಲ್ಲಿ ಫ್ಯಾಸಿಸ್ಟ ದಮನದ ವಿರುದ್ಧ ಜನತೆ ಸಂಘಟಿಸಿದ ಗೆರಿಲ್ಲಾ ಹೋರಾಟಗಳು-ಆಂಗ್ಲೋ – ಅಮೇರಿಕನ್ ಪಡೆಗಳಿಗೆ ಅವುಗಳ ಸಹಾಯ, ಕಮ್ಯುನಿಸ್ಟರ ಪ್ರಮುಖ ಪಾತ್ರದ ಬಗ್ಗೆ ಮೌನ ಇವೆಲ್ಲಕ್ಕಿಂತಲೂ ಮಿಗಿಲಾಗಿ ಯುದ್ಧದಲ್ಲಿ ಸೋವಿಯೆತ್ ಒಕ್ಕೂಟದ ಕೆಂಪು ಸೈನ್ಯ ಮತ್ತು ಜನತೆಯ ತ್ಯಾಗ ಬಲಿದಾನಗಳ ಪಾತ್ರದ ಬಗ್ಗೆ ಕರಾಳ ಮೌನ ಎಡ ಪಕ್ಷಗಳು, ಕಮುನಿಸ್ಟ ಪತ್ರಿಕೆಗಳು ಈ ಅಂಶದ ಬಗ್ಗೆ ನಡೆಸಿದ ಪ್ರಚಾರ, ಅಧಿಕೃತ ಆಚರಣೆಯ ಗದ್ದಲದಲ್ಲಿ ಮುಳುಗಿಹೋದವು.

ಈ ಮೇಲೆ ಹೇಳಿದ ಮಾದರಿಯ ವಿಜಯೋತ್ಸವ ಆಚರಣೆ ಮತ್ತು ಆಶ್ಚರ್ಯಕಾರಿ ನ್ಯೂನ್ಯತೆಗಳು ಕಾಕತಾಳಿಯವಲ್ಲ. 1944-45 ರ ಅವಧಿಯ ಅತಿಶಯ ಮಹತ್ವಕ್ಕೆ, ಯುದ್ಧದ ಮೊದಲ 5 ವರ್ಷ ಅದರಲ್ಲೂ 1941-44 ರ 3 ವರ್ಷದ ಅವಧಿಯ ಚರಿತ್ರೆಯನ್ನು ಯುರೋಪಿನ ಜನರಿಗೆ ನೆನಪಿಸದಿರುವುದೇ ಉದ್ದೇಶ. 1939-41 ರ ಚರಿತ್ರೆ ನೆನಪಿಸಿದರೆ ಪ. ಯುರೋಪಿನ ಬಂಡವಾಳಶಾಹಿ ದೇಶಗಳಲ್ಲಿ, ಆಳುವ ವರ್ಗ ಫ್ಯಾಸಿಸಂ ಜತೆ ಶಾಮೀಲಾಗಿ ಅಥವಾ ಹೆದರಿ ಓಡಿಹೋಗಿ ಜನತೆಯ ಸ್ವಾತಂತ್ರ್ಯ ಹರಣಕ್ಕೆ ಕಾರಣವಾದದ್ದು ಬಯಲಾಗುತ್ತದೆ. 1941-44 ರ ಅವಧಿಯಲ್ಲಿ ಸೋವಿಯತ್ ಒಕ್ಕೂಟ ತನ್ನ ಮೇಲೆ ನಡೆದ ಪ್ರಚಂಡ ದಾಳಿಯನ್ನು ಎದುರಿಸಿ ಹಿಮ್ಮೆಟ್ಟಿಸಲು ಆರಂಭಿಸಿದ್ದು, ಅಲ್ಲದೆ ಸಾಮಾಜ್ಯಶಾಹಿ ಶಕ್ತಿಗಳಿಗೆ ಹೋಲಿಕೆಯಲ್ಲಿ ಆರ್ಥಿಕ, ಸೈನಿಕವಾಗಿ ದುರ್ಬಲವಾಗಿದ್ದರೂ ಇದನ್ನು ಸಾಧಿಸಿದ್ದು ಮರೆಮಾಚಲು ಸಾಧ್ಯವಿಲ್ಲ. ಅದೇ ಅವಧಿಯಲ್ಲಿ ಜಗತ್ತಿನಾದ್ಯಂತ ಫ್ಯಾಸಿಸ್ಟ-ವಿರೋಧಿ ರಂಗ ಕಟ್ಟಲು ಪ್ರಯತ್ನ, ಬ್ರಿಟನ್-ಅಮೇರಿಕಗಳು ಪಶ್ಚಿಮದಲ್ಲಿ ನಾಝಿಗಳ ವಿರುದ್ಧ ಎರಡನೇ ರಣರಂಗ ಆರಂಭಿಸಲು 1941 ರಲ್ಲೇ ಒಪ್ಪಿದ್ದರೂ ಎರಡನೇ ರಣರಂಗ ಆರಂಭಿಸುವಲ್ಲಿ ಎರಡು ವರ್ಷಗಳಿಗೂ ಮೀರಿದ ಉದ್ದೇಶಪೂರ್ವಕ ವಿಳಂಬ ಮತ್ತು ಕೆಂಪುಸೈನ್ಯನಾಝೀಪಡೆಗಳನ್ನು ಹಿಮ್ಮೆಟ್ಟಿಸುತ್ತಾ ಪೂ .ಯುರೋಪಿನವರೆಗೆ ಬಂದಾಗ 1944 ರಲ್ಲಷ್ಟೇ ಪಶ್ಚಿಮದಲ್ಲಿ ಎರಡನೇ ರಣರಂಗದಲ್ಲಿ ಆಂಗ್ಲೋ - ಅಮೇರಿಕನ್ ಪಡೆಗಳ ಪದಾರ್ಪಣ – ಇವು ಚರಿತ್ರೆಯ ಮರೆಯಲಾಗದ ಕಟು ಸತ್ಯ. ಯುದ್ಧದ ಗತಿಯನ್ನು ನಿಜವಾಗಿ ಬದಲಾಯಿಸಿದ್ದು ಸ್ಟಾಲಿನ್ ಗ್ರಾಡ್ ಕದನ ಮತ್ತು ಕುರ್ಸ್ಕ್ ಕದನದಲ್ಲಿ ಕೆಂಪು ಸೈನ್ಯದ ವಿಜಯ ಮತ್ತು ನಾಜಿ ಪಡೆಗಳ ಹಿನ್ನಡೆ. ಯುರೋಪಿನ ಎಲ್ಲಾ ದೇಶಗಳನ್ನು ಫ್ಯಾಸಿಸ್ಟರಿಂದ ವಿಮುಕ್ತಿಗೊಳಿಸುವ ಕೆಲಸ ಸೋವಿಯೆತ್ ಕೆಂಪು ಸೈನ್ಯ ಒಂದೇ ಮಾಡಬಲ್ಲದು ಎಂದು ಮನಗಂಡ ಮೇಲೆ ನಾರ್ಮಂಡಿ ಕಾರ್ಯಾಚರಣೆಗೆ ಯೋಜನೆ ಹಾಕಿದ್ದು. ಇವೆಲ್ಲವನ್ನೂ ಯುರೋಪಿನ ಜನ ಸಮುದಾಯದಿಂದ ಅಳಿಸಿ ಹಾಕುವುದು, ಯುವಪೀಳಿಗೆಗೆತಿರುಚಿದ ಚರಿತ್ರೆಯನ್ನು ಹೇಳುವುದು - ಇದಕ್ಕಾಗಿ ಫ್ಯಾಸಿಸ್ಟ - ವಿರೋಧಿ ವಿಜಯೋತ್ಸವವನ್ನು ಸಾಮ್ರಾಜ್ಯಶಾಹಿ ಪ್ರಚಾರ ಯಂತ್ರ ಎಚ್ಚರಿಕೆಯಿಂದ ಸುಸಂಘಟಿತವಾಗಿ ಬಳಸಿಕೊಂಡಿದೆ.

ಯುರೋಪಿನ ಶಾಂತಿಪ್ರಿಯ ಜನತೆ ಸೋವಿಯೆತ್ ಶಾಂತಿ ಸಲಹೆಗಳಿಂದ ರೋಮಾಂಚಿತರಾಗಿದ್ದಾರೆ. ಯುರೋಪಿನಲ್ಲಿ ಇನ್ನೊಂದು ಮಹಾಯುದ್ಧ ಆಗಗೊಡುವುದಿಲ್ಲ ಎಂದು ಪಣತೊಟ್ಟಿದ್ದಾರೆ. "ರಶ್ಯನರು ಬರುತ್ತಿದ್ದಾರೆ" ಎಂಬ ಬೆದರಿಕೆಗೆ ಜನ "ಸತ್ತು ಮಣ್ಣಾಗುವುದಕ್ಕಿಂತ ಕೆಂಪಾಗಿ ಬದುಕುವುದು ಲೇಸು" (Better Red than dead) ಎಂದು ಉತ್ತರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಫ್ಯಾಸಿಸ್ಟ – ವಿರೋಧಿ ಸ್ವಾತಂತ್ರ್ಯ ಹೋರಾಟದಲ್ಲಿ ಸೋವಿಯೆತ್ ಪಾತ್ರವನ್ನು ಅಲ್ಲಗಳೆಯುವುದು, ತಿರುಚುವುದು ಸಾಮ್ರಾಜ್ಯಶಾಹಿಗೆ ಅತ್ಯಂತ ತುರ್ತಿನದಾಗಿದೆ. ಸೋವಿಯೆತ್ ಪಾತ್ರವನ್ನು ಹೇಳಲೇಬೇಕಾಗಿ ಬಂದಾಗ – ಆಂಗ್ಲೋ ಅಮೇರಿಕನ್ ಮಿಲಿಟರಿ ಉಪಕರಣಗಳ ಸರಬರಾಜಿನಿಂದ ಮಾತ್ರವೇ ಸಾಧ್ಯವಾಯಿತು, ರಶ್ಯನ್ ಚಳಿಗಾಲವೇ ನಾಜಿ ಪಡೆ ಹಿಮ್ಮೆಟ್ಟುವುದಕ್ಕೆ ಕಾರಣ – ಎಂದು ಜಾರಿಕೊಳ್ಳುವ ಸಿನಿಕ ಪ್ರಯತ್ನ ನಡೆದಿದೆ. ಕೊನೆಯ ವಿಜಯೋತ್ಸವಕ್ಕೆ ಮೇ 85 ರಲ್ಲಿ ಜರ್ಮನಿಗೆ ಹೋದ ರೇಗನ್ ನಾಜಿ – ಸೈನಿಕರ ಸಮಾಧಿಗೆ ಭೇಟಿ ನೀಡಿ ಫ್ಯಾಸಿಸ್ಟ ಪರ - ವಿರೋಧಿ ಹೋರಾಟಗಾರರನ್ನು ತಾನು ಒಂದೇ ರೀತಿಯಲ್ಲಿ ನೋಡುತ್ತೇನೆ ಎಂದು ಜರ್ಮನ್ ಸಂಪ್ರದಾಯವಾದಿ ಮತ್ತು ನವ – ಫ್ಯಾಸಿಸ್ಟರಿಗೆ ಕುಮ್ಮಕ್ಕು ನೀಡಿದ್ದು ಇದಕ್ಕೆಲ್ಲಾ ಕಳಶವಿಟ್ಟಂತಿದೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ರೈತ ಕಾರ್ಮಿಕರಿಗೆ ಮತ್ತು ಜನತೆಯ ನೆನಪಿಸುವುದು ಫ್ಯಾಸಿಸ್ಟ – ವಿರೋಧಿ ಹೋರಾಟದಲ್ಲಿ ಸೋವಿಯೆತ್ ಒಕ್ಕೂಟದ ಪಾತ್ರ ಹಸಿರಾಗಿಸಲು ಪ್ರಚಾರ ನಮ್ಮ ಸಾಮ್ರಾಜ್ಯಶಾಹಿ – ವಿರೋಧಿ ಕರ್ತವ್ಯದ ಅಂಗ. ○

ಮೇ ದಿನದ ಶತಮಾನೋತ್ಸವ ಆಚರಣೆ

ಕುಂದಾಪುರ ತಾಲೂಕು

ಮೇ ದಿನದ ಶತಮಾನೋತ್ಸವದ ಅಂಗವಾಗಿ ಇತ್ತೀಚಿಗೆ ಕುಂದಾಪುರ ತಾಲೂಕಿನ ಪ್ರದೇಶಗಳಲ್ಲಿ ನಡೆದ ಸಾರ್ವಜನಿಕ ಸಭೆಗಳಲ್ಲಿ ಕೆ. ವಿಶ್ವನಾಥ, ವಿ. ಮಹಾಬಲ, ಸಿ ನಾರಾಯಣ, ದಾಸ ಭಂಡಾರಿ ಮತ್ತು ಗೋವಿಂದ ಶೆಟ್ಟಿಗಾರ ಇವರು ಭಾಷಣ ಮಾಡಿದರು.

ಕುಂದಾಪುರ ತಾಲೂಕಿನ ಕಾಂತಾವರ ಮತ್ತು ಮಾರ್ಗೋಳಿ ಪ್ರದೇಶದಲ್ಲಿ ಸಾರ್ವಜನಿಕ ಸಭೆಗಳು ನಡೆದು, ಕೆ. ಶಂಕರ್ ಭಾಷಣ ಮಾಡಿದರು. ನಂತರ "ಸಮುದಾಯ ತಂಡ"ದವರಿಂದ "ಮಳೆಯದೂತರು" ಮತ್ತು "ನಮ್ಮೂರು" ಎಂಬ ನಾಟಕಗಳ ಪ್ರದರ್ಶನವಾಯಿತು. ಸ್ಥಳೀಯ ಡಿ. ವೈ. ಎಫ್. ಐ. ಘಟಕವು ಕಾರ್ಯಕ್ರಮದ ಏರ್ಪಾಡು ಮಾಡಿರುತ್ತದೆ.

ತಾಲೂಕಿನ ಆನಗಳ್ಳಿ ಪ್ರದೇಶದಲ್ಲಿ ಮತ್ತು ಬಸ್ರೂರಿನಲ್ಲಿ ಸಾರ್ವಜನಿಕ ಸಭೆಗಳು ನಡೆದು, ಸಿ. ನಾರಾಯಣನವರು ಭಾಷಣ ಮಾಡಿದರು. ಸಮುದಾಯ ತಂಡದವರಿಂದ ನಾಟಕಗಳು ಪ್ರದರ್ಶಿಸಲ್ಪಟ್ಟಿತು.

ಕೋಣಿ ಗ್ರಾಮದಲ್ಲಿ ಸಾರ್ವಜನಿಕ ಸಭೆಯು ಸ್ಥಳೀಯ ರೈತ ಸಂಘದ ಘಟಕದ ನೇತೃತ್ವದಲ್ಲಿ ನಡೆದು ಅಬ್ರಹಾಂ ಕರ್ಕಡ, ಸಿ. ನಾರಾಯಣ, ವೆಂಕ್ಟೇಶ ಕೋಣಿ ಇವರು ಮಾತನಾಡಿದರು.

ಮಾರ್ಗೋಳಿ ಎಂಬಲ್ಲಿ ಹಾಲ್ ಮೀಟಿಂಗ್ ಸ್ಥಳೀಯ ಡಿ. ವೈ. ಎಫ್. ಐ. ಘಟಕದ ಆಶ್ರಯದಲ್ಲಿ ನಡೆದುಸಭೆಯನ್ನುದ್ದೇಶಿಸಿ ಕೆ, ಶಂಕರ್ ಮತ್ತು ವಿ. ಮಹಾಲನವರು ಭಾಷಣ ಮಾಡಿದರು.

ಉಡುಪಿ

ಮೇ ದಿನದ ಶತಮಾನೋತ್ಸವದ ಅಂಗವಾಗಿ, ಪಾಸ್ತಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯವರಾದ ಅಬ್ರಹಾಂ ಕರ್ಕಡ, ಸಿ. ಐ. ಟಿ. ಯು ಮುಂದಾಳುಗಳಾದ ಕೆ. ಶಂಕರ್, ಡೇವಿಡ್ ಕರ್ಕಡರವರು ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶಂಕರ್ ಶೆಟ್ಟಿಗಾರ್‌ರವರು ವಹಿಸಿದ್ದು, ಆರಂಭದಲ್ಲಿ ಎಚ್. ವಿಠಲನವರು ಸ್ವಾಗತ ಭಾಷಣ ಮಾಡಿದರು.

ಉಡುಪಿ ತಾಲೂಕಿನ ಗೇತ್ರಿಯಲ್ಲಿ ನಾರಾಯಣಶೆಟ್ಟಿಗಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಾಧು ಪೂಜಾರಿ, ಅಬ್ರಹಾಂ ಕರ್ಕಡ, ಕೆ. ಶಂಕರ್‌ರವರು ಭಾಷಣ ಮಾಡಿದರು.

ಉಡುಪಿ ತಾಲೂಕಿನ ಸಾಲಿಗ್ರಾಮದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಕೆ. ಶಂಕರ್, ಎಚ್. ವಿಠಲ್ ಮತ್ತು ಡೇವಿಡ್ ಕರ್ಕಡರವರು ಭಾಷಣ ಮಾಡಿದರು. ಸಮುದಾಯ ತಂಡದವರಿಂದ ನಾಟಕ ಪ್ರದರ್ಶಿಸಲ್ಪಟ್ಟಿತು.

ಸಿಂಧನೂರು

ಸಿಂಧನೂರಿನಲ್ಲಿ ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಟನೆಗಳಾದ ಜನರಲ್ ವರ್ಕರ್ಸ್ ಯೂನಿಯನ್, ಹಮಾಲರ ಸಂಘ, ಮೇಸನರ ಸಂಘ. ಹಾಗೂ ಪ್ರಗತಿಪರ ಸಂಘಟನೆಗಳಾದ ಡಿವೈಎಫ್‌ಐ, ಎಸ್‌ಎಫ್‌ಐ ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳನ್ನೊಳಗೊಂಡು ಮೇ ಶತಮಾನೋತ್ಸವ ಸಮಿತಿಯನ್ನು ರಚಿಸಲಾಗಿತ್ತು.

ಇತ್ತೀಚಿಗೆ ನಡೆದ ಮೇ ಶತಮಾನೋತ್ಸವದ ಅಂಗವಾಗಿ ಮಹಾತ್ಮ ಗಾಂಧಿ ವೃತ್ತದಲ್ಲಿ ಬಸವರಾಜಪ್ಪ ಮಾಲೀ ಪಾಟೀಲರು ಧ್ವಜಾರೋಹಣವನ್ನು ನೇರವೇರಿಸಿ, ಮೇ 1ರ ಕಾರ್ಮಿಕ ದಿನಾಚರಣೆಯ ಬಗ್ಗೆ ಮತ್ತು ಪ್ರಸ್ತುತ ಕಾರ್ಮಿಕ ಸಮಸ್ಯೆಗಳ ಬಗ್ಗೆ ಮಾತನಾಡಿದರು. ನಂತರಮಾತನಾಡಿದ ಮೇ ದಿನ ಶತಮಾನೋತ್ಸವ ಸಮಿತಿಯ ಸಂಚಾಲಕ ಬಾಷುಮಿಯಾ ಇವರು ಮೇ ದಿನ ಶತಮಾನೋತ್ಸವದ, ಹಾಗೂ ಕಾರ್ಮಿಕರ ಹೋರಾಟದ ಇತಿಹಾಸದ ಹಾಗೂ ಪ್ರಸ್ತುತ ದುಡಿಯುವ ಜನ ವಿಭಾಗಗಳ ಹೋರಾಟದ ಬಗ್ಗೆ ಮಾತನಾಡಿದರು.

ನಗರದ ಎ. ಕೆ. ಗೋಪಾಲನ್ ಕಾಲನಿಯಲ್ಲಿಯೂ ಸಹಿತ ಧ್ವಜಾರೋಹಣ ಮಾಡಲಾಯಿತು. ಧ್ವಜಾರೋಹಣದ ನಂತರ ಜಿ. ವೆಂಕನಗೌಡ ಹಾಗೂ ಶೇಕಾಖಾದ್ರಿ ಇವರು ಜನರನ್ನುದ್ದೇಶಿಸಿ ಮಾತನಾಡಿದರು.

ಮಹಾತ್ಮ ಗಾಂಧಿಯ ವೃತ್ತದಿಂದ ಹೋರಟ ಮೆರವಣಿಗೆಯಲ್ಲಿ ಸುಮಾರು 1000 ಕಾರ್ಮಿಕರು ಪಾಲ್ಗೊಂಡಿದ್ದರು. ಅದರಲ್ಲೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹರಿಣಿ ಕಕ್ಕೇರಿಯವರು ಮೇ ದಿನ ಶತಮಾನೋತ್ಸವದ ಬಗ್ಗೆ ಮತ್ತು ಕಾರ್ಮಿಕರ ಮಹಿಳೆಯರ ಒಟ್ಟಾರೆ ದುಡಿಯುವ ಜನ ವಿಭಾಗದ ಸಮಸ್ಯೆಗಳ ಬಗ್ಗೆ ಮತ್ತು ದುಡಿಯುವ ವರ್ಗದ ಹೋರಾಟದಲ್ಲಿ ಮಹಿಳಾ ಸಂಘಟನೆಗಳ ನಿಲುವಿನ ಬಗ್ಗೆ ಮಾತನಾಡಿದರು. ಹಾಗೂ ಡಿ ವೈ ಎಫ್ ಐ ನಿಂದ ನಾರಾಯಣ ಕಿಲ್ಲೇದ, ಕಾಂ. ನರಸಿಂಹಪ್ಪ ಇವರು ಸಹಿತ ಮೇ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಸಿಐಟಿಯು ಅಧ್ಯಕ್ಷ ಜಿ. ವೆಂಕನಗೌಡ ಅಧ್ಯಕ್ಷತೆಸ್ಥಾನವಹಿಸಿ ಸಮಿತಿಯ ಸಂಚಾಲಕ ಬಾಷುಮಿಯಾ ಇವರು ಪ್ರಸ್ತುತ ನಿರುದ್ಯೋಗ ಸಮಸ್ಯೆ ಬಡತನ, ಮತ್ತು ಇನ್ನಿತರ ಎಲ್ಲಾ ತರಹದ ಸಮಸ್ಯೆಗಳಿಗೆ ಬಂಡವಾಳ ಶಾಹಿ ವ್ಯವಸ್ಥೆಯೇ ಕಾರಣವೆಂದು ಹಾಗೂ ಹೊಸ ವ್ಯವಸ್ಥೆಯ ನಿರ್ಮಾಣಕ್ಕೆ ಮಾರ್ಕ್ಸ್‌ವಾದ, ಲೆನಿನ್‌ವಾದದ ಸಿದ್ಧಾಂತ ಹಾಗೂ ನಾಯಕತ್ವದ ಬಗ್ಗೆ ಮಾತನಾಡಿದರು. ರಾಮನಗೌಡ ಇವರು ಸ್ವಾಗತಿಸಿದರು, ಕೊನೆಯಲ್ಲಿ ಶೇಷಾಖಾದ್ರಿ ಇವರು ವಂದಿಸಿದರು.

ಆಟೋರಿಕ್ಷಾ ಚಾಲಕರ ಸಭೆ

ದ ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘ (ಸಿಐಟಿಯು) ಇದರ ಎಂಟನೇ ವಾರ್ಷಿಕ ಮಹಾ ಸಭೆಯು 30-5-86 ರಂದು ಮಂಗಳೂರಿನ ಪುರಭವನದಲ್ಲಿ ಸಂಘದ ಅಧ್ಯಕ್ಷರಾದ ಪಿ. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೆಂಗಳೂರಿನ ನ್ಯಾಯವಾದಿ ಗೋಪಾಲಗೌಡರು ಮಾತನಾಡುತ್ತಾ ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಹೋರಾಟ ಮಾಡುವುದರ ಮೂಲಕ ನ್ಯಾಯ ಪಡೆಯುವುದೊಂದೇ ಈ ಬಂಡವಾಳಶಾಹಿ ಸಮಾಜದಲ್ಲಿ ಸಾಧ್ಯ ಎಂದು ಹೇಳುತ್ತ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡುವುದರೊಂದಿಗೆ ಈ ವ್ಯವಸ್ಥೆಯ ಬದಲಾವಣೆಯ ಸಲುವಾಗಿಯೂ ಪ್ರಯತ್ನಿಸಬೇಕೆಂದು ಕರೆಯಿತ್ತರು. ಕರ್ನಾಟಕ ರಾಜ್ಯ ಆಟೋರಿಕ್ಷಾಚಾಲಕರ ಸಂಘದ ಸಂಘಟನಾ ಕಾರ್ಯದರ್ಶಿ ಎ. ಎ. ರಮೇಶ ಮಾತನಾಡುತ್ತಾ 1939 ರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತ ನಡೆಸುವಾಗ ಇದ್ದ ಮೋಟಾರ್ ವಾಹನ ಕಾಯ್ದೆ ಕಾನೂನನ್ನೇ ಈಗಿನಸರಕಾರ ಜ್ಯಾರಿಗೊಳಿಸುತ್ತಿದ್ದು ಈ ಕಾನೂನಿನ ಬದಲಾವಣೆಗೆ ರಾಜ್ಯದ ರಿಕ್ಷಾಚಾಲಕರು ಸಂಘಟಿತರಾಗಿ ಹೋರಾಟ ಮಾಡಬೇಕೆಂದು ಹೇಳಿದರು. 1985 ರ ಲೆಕ್ಕ ಪತ್ರವನ್ನು ಸಂಘದ ಕೋಶಾಧಿಕಾರಿ ಜಗದೀಶ ಸುವರ್ಣರು ಮಂಡಿಸಿದ್ದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಬಳಿಕ ಸರ್ವಾನುಮತದಿಂದ ಮುಂದಿನ ವರ್ಷಕ್ಕೆ ಪದಾಧಿಕಾರಿಗಳಾಗಿ ಈ ಕೆಳಗಿನವರನ್ನು ಚುನಾಯಿಸಲಾಯಿತು.

ಪಿ. ರಾಮಚಂದ್ರರಾವ್ ಅಧ್ಯಕ್ಷ ಪಿ, ಸುರೇಶ ಮಲ್ಯ ಹಾಗೂ ಜಯಂತ ಕಾಮತ ಉಪಾಧ್ಯಕ್ಷರು, ಕಾರ್ಯದರ್ಶಿ ಆಗಿ ಕೆ. ಅಬೂಬಕ್ಕರ್, ಜೊತೆ ಕಾರ್ಯದರ್ಶಿಗಳಾಗಿ ಜೆ. ಶೇಖರ ಅಂಚನ್ ಹಾಗೂ ಸುರೇಶ್ ನ್ಯಾಕ್ ಹಾಗೂ ಕೋಶಾಧಿಕಾರಿ ಆಗಿ ಜಗದೀಶ ಸುವರ್ಣ ಹಾಗೂ 15 ಮಂದಿ ಸಮಿತಿ ಸದಸ್ಯರನ್ನು ಒಳಗೊಂಡ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಮಹಾಸಭೆ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು.

1) 26-3-86ರಂದು ಕರ್ನಾಟಕ ರಾಜ್ಯ ಸರಕಾರ ರಿಕ್ಷಾ ಮೀಟರ್ ದರ ನಿಗದಿಪಡಿಸಿದ ಮೇಲೆ ಕೇಂದ್ರ ಸರಕಾರದ ಬಜೆಟಿನಲ್ಲಿ ಪೆಟ್ರೋಲ್, ರಿಕ್ಷಾದ ಬಿಡಿಭಾಗಗಳು, ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ವಿಪರೀತ ಏರಿಸಿದೆ. ರಾಜ್ಯ ಸರಕಾರ ಆರ್.ಟಿ.ಓ ಕಚೇರಿಗೆ ಕಟ್ಟಬೇಕಾದ ಚಲನ್‌ಗಳ ಬೆಲೆಯನ್ನು ವಿಪರೀತ ಏರಿಸಿದ ಬಳಿಕವೂ ರಿಕ್ಷಾ ಮೀಟರ್‌ದರ ಇನ್ನೂ ಏರಿಸಿಲ್ಲ.ಆದುದರಿಂದ ರಿಕ್ಷಾಗಳಿಗೆ ಮೀಟರ್ ದರವನ್ನು ನಿಗದಿಪಡಿಸುವ ಅಧಿಕಾರವನ್ನು ಆಯಾ ಜಿಲ್ಲೆಯ ಆರ್.ಟಿ.ಓ. ಅಧಿಕಾರಿಗಳಿಗೆ ನೀಡಬೇಕೆಂದು ಒತ್ತಾಯಿಸಿದೆ.

2) 13-8-85 ರಂದು ಆರ್. ಟಿ. ಓ. ಅಧಿಕಾರಿಗಳು ಆಟೋರಿಕ್ಷಾ ಪರ್ಮಿಟ್ ಸೀರಿಯಲ್ ನಂಬರ್ ಕೆಳಗೆ ಅವರವರ ನಿಲುಗಡೆ ಹೆಸರನ್ನು ಹಾಕಬೇಕೆಂದು ನಿರ್ಣಯಿಸಿದರೂ ಕೂಡಾ ಈ ತನಕ ರಿಕ್ಷಾ ಮಾಲಕರು ಅದನ್ನು ಪಾಲಿಸದೆ ಇರುವುದರಿಂದ ಅಂತಹ ಮಾಲಕರ ಮೇಲೆ ಅಧಿಕಾರಿಗಳು ಈ ತನಕ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಸಂಘದ ಮಹಾಸಭೆಯು ತೀವ್ರವಾಗಿ ಖಂಡಿಸುತ್ತದೆ.

3) ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬೇಕೆಂದು ಇಲ್ಲವಾದಲ್ಲಿ ಅವರಿಗೆ ನಿರುದ್ಯೋಗ ಭತ್ಯೆ ನೀಡಬೇಕೆಂದು ಒತ್ತಾಯಿಸಿ ಮಹಾಸಭೆಯು ನಿರ್ಣಯವೊಂದನ್ನು ಕೈಗೊಂಡಿದೆ.

ಕೊನೆಗೆ ಅಧ್ಯಕ್ಷ ಸ್ಥಾನದಿಂದಮಾತನಾಡುತ್ತಾ ಪಿ. ರಾಮಚಂದ್ರರಾವ್ ರಿಕ್ಷಾಗಳಿಗೆ ನೀಡಿದ ಪರ್ಮಿಟ್ ಮತ್ತು ಆಯಾಯ ಪ್ರದೇಶಗಳಿಗೆ ರಹದಾರಿ ನೀಡಿದ ಆಧಾರದಲ್ಲಿ ರಿಕ್ಷಾಗಳನ್ನು ಚಲಿಸಬೇಕೇ ಹೊರತು ಬೇರೆ ರಹದಾರಿ ಇಲ್ಲದ ಪ್ರದೇಶದಲ್ಲಿ ಚಲಿಸುವುದು ಕಾನೂನು ಬಾಹಿರ ಎಂದು ಹೇಳಿದರು. ಕೊನೆಗೆ ಸುರೇಶ ಮಲ್ಯ ವಂದನಾರ್ಪಣೆಗೈದರು. ○

ಜನತಾ ಮನೆಗಳ ದುರ್ವ್ಯವಸ್ಥೆ

ರಾಣೇಬೆನ್ನೂರಿನ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಡಚ್ ಸರಕಾರದ ಸಹಾಯದಿಂದ ಕರ್ನಾಟಕ ಸರಕಾರ 150 ಮನೆಗಳನ್ನು ಕಟ್ಟಿಸಿಕೊಟ್ಟಿದೆ. ಮನೆಗಳನ್ನು ಕಟ್ಟುತ್ತಿರುವಾಗಲೇ ಕಟ್ಟಡದ ಅಭದ್ರತೆಯ ಬಗ್ಗೆ ಕಂಟ್ರಾಕ್ಟರ್ ನಡೆಸುತ್ತಿರುವ ಮೋಸದ ಬಗ್ಗೆ ನೇಕಾರರು ಸರಕಾರಕ್ಕೆ ತಿಳಿಸುತ್ತಾ ಬಂದಿದ್ದರು ಅದರ ಅಂದಿನಿಂದ ಇಂದಿನವರೆಗೂ ನೇಕಾರರ ಕೂಗಿಗೆ ಯಾರೂ ಕಿವಿಗೊಡಲಿಲ್ಲ. ಕಳೆದ ಕೆಲವು ವರ್ಷಗಳಿಂದ ಸರಿಯಾಗಿ ಮಳೆಬಾರದೇ ಇದ್ದದ್ದರಿಂದ ಈ ಮನೆಗಳ ಭದ್ರತೆಯ ಬಗ್ಗೆ ನೇಕಾರರು ವ್ಯಕ್ತಪಡಿಸಿದ ಅನುಮಾನಗಳು ಅನುಮಾನಗಳಾಗಿಯೇ ಉಳಿದಿದ್ದವು ಆದರೆ ಈ ವರ್ಷ ಮೊನ್ನೆ ತಾ. 29-5-86 ರಂದು ಬಿರುಗಾಳಿ, ಮಳೆಗೆ ಈ ಮನೆಗಳ ನಿಜವಾದ ಬಣ್ಣ ಬಯಲಾಗಿದೆ. ಗೋಡೆಗಳು ಕುಸಿಯುತ್ತಿವೆ. ಹೊದಿಸಲಾದ ಸಿಮೆಂಟು ಸೀಟುಗಳು ಕಬ್ಬಿಣದ ಅಂಗ್ಲರ್ ಪಟ್ಟಿ ಸಮೇತ ಗಾಳಿಗೆ ಹಾರಿಹೋಗಿದೆ. ಎಲ್ಲಾ ಮನೆಗಳು ಸೋರಿವೆ. ಮೊದಲನೆಯ ಈ ಅಲ್ಪ ಮಳೆಗೇ ಇಷ್ಟು ಅನಾಹುತವಾಗಿದ್ದರೆ, ಈ ಮಳೆಗಾಲದಲ್ಲಿ ಪೂರ್ತಿ ಕಳೆಯುವುದು ಹೇಗೆಂಬುದು ನೇಕಾರರಿಗೆ ಚಿಂತೆಯಾಗಿದೆ. ಮನೆಗಳು ಕುಸಿದು ಬಿದ್ದು ಜೀವಹಾನಿ ಮಗ್ಗ ಮೊದಲಾದ ಆಸ್ತಿಹಾನಿಯಾದರೆ ಏನು ಗತಿಯಾಗುವದು ಎಂಬುದು ಅವರ ಪ್ರಶ್ನೆಯಾಗಿದೆ. ಭದ್ರತೆಯಿಲ್ಲದ ಈ ಮನೆಗಳಿಗೆ ನೀಡಲಾದ ಸಾಲವನ್ನು ನಾವು ಯಾಕೆ ಹೊರಬೇಕು. ಎಂದು ಪ್ರಶ್ನಿಸುವಂತಾಗಿದೆ. ರಾಣೇಬೆನ್ನೂರ ತಾಲೂಕಾ ತುಮ್ಮಿನಕಟ್ಟೆ ಗ್ರಾಮದಲ್ಲಿಯೂ ಇಂತಹ 100 ಮನೆಗಳನ್ನು ಕಟ್ಟಿಸಲಾಗಿದ್ದು, ಅವುಗಳ ಪರಿಸ್ಥಿತಿಯೂ ಹೀಗೆ ಇದೆ,

ಮುನ್ನೆಚ್ಚರಿಕೆ ಕ್ರಮಗಳಿಗಾಗಿ ಒತ್ತಾಯ ಸದರಿ ಮನೆಗಳು ಯಾವುದೇ ಗಳಿಗೆಯಲ್ಲಿ ಬಿದ್ದು ಹೋಗಿ ನೇಕಾರರ ಜೀವ ಹಾಗೂ ಮಗ್ಗ ಮೊದಲಾದ ಆಸ್ತಿಪಾಸ್ತಿಗೆ ಹಾನಿ ಸಂಭವಿಸುವದನ್ನು ತಡೆಗಟ್ಟಲು ಸರಕಾರ ಹಾಗೂ ನಿಗಮದ ಛೇರ್‌ಮನ್ನರು ಮತ್ತು ಅಧಿಕಾರಿಗಳು ಕೂಡಲೇ ಕ್ರಮ ವಹಿಸಬೇಕೆಂದು ರಾಣೇಬೆನ್ನೂರ ತಾಲೂಕಾ ನೇಕಾರ ಕಾರ್ಮಿಕರ ಸಂಘ ಒತ್ತಾಯಿಸುತ್ತದೆ.ಜೀವಹಾನಿ, ಆಸ್ತಿಪಾಸ್ತಿ ನಾಶವಾಗುವದನ್ನು ತಡೆಗಟ್ಟಲು ಕೂಡಲೇ ಸಂಬಂಧಪಟ್ಟವರು ತೀವ್ರಕ್ರಮ ವಹಿಸಬೇಕೆಂದು. ಕಾರ್ಯದರ್ಶಿ ಎನ್. ಆರ್. ವಿಭೂತಿಯವರು ಒತ್ತಾಯಿಸಿದ್ದಾರೆ,

ಭಾರತವನ್ನು ಕಬಳಿಸಬೇಕೆಂದಿದ್ದ ಹಿಟ್ಲರ್

(5ನೆಯ ಪುಟದಿಂದ)

ಜನಾಂಗಕ್ಕೇನೇ ರಾಕ್ಷಸೀ ಸ್ವರೂಪವಾದ ಹಿಟ್ಲರನನ್ನೂ ಅವರ ಕ್ರೂರ ಸೈನಿಕರನ್ನೂ ಮಣ್ಣುಪಾಲು ಮಾಡಿದ ಪರಿಣಾಮವಾಗಿ ಯುರೋಪ ಖಂಡದ, ಜಗತ್ತಿನ ಇತರ ಭಾಗದ ರಾಷ್ಟ್ರಗಳಂತೆಯೇ ಭಾರತ ದೇಶ ಕೂಡ ಬ್ರಿಟಿಷರ ವಸಾಹತುವಿನಿಂದ ಹಿಟ್ಲರನ ಗುಲಾಮಗಿರಿಯ ನರಕದಿಂದ ಪಾರಾಗಲು, ತನ್ನ ಸ್ವಾತಂತ್ರ ಚಳುವಳಿಯನ್ನು ಇನ್ನೂ ಧೀರತನದಿಂದ ಮುಂದುವರಿಸಲು ಕೊನೆಗೆ ಬ್ರಿಟಿಷರು ದೇಶ ಬಿಟ್ಟು ಹೋಗುವಂತೆ ಮಾಡಲುಸಾಧ್ಯವಾಯಿತು. ಸೋವಿಯತ್ ಜನರಿಗೆ, ಕೆಂಪು ಸೈನ್ಯಕ್ಕೆ ಭಾರತದ ಜನತೆ ಚಿರ ಋಣಿಗಳಾಗಿರಬೇಕಾದದ್ದು ಅತ್ಯಗತ್ಯ.

ಮಳೆ ಬಂತು - ರೈತರೇ ಎದ್ದೇಳಿ, ಎಚ್ಚರಾಗಿರಿ

ಕರ್ನಾಟಕ ಪ್ರಾಂತ ರೈತ ಸಂಘದ ಕರೆ

ರೈತ ಬಾಂಧವರೇ,

ಕರ್ನಾಟಕ ಸರ್ಕಾರವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೈತರಿಗೆ ಅನುಕೂಲವಾಗುವಂತೆ ಕೃಷಿ ಇಲಾಖೆಯ ಮೂಲಕ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿಗಳ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ.

ಈ ಯೋಜನೆಗಳ ಪ್ರಕಾರ ವಿವಿಧ ರೀತಿಯ ಭಿತ್ತನೆ ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಕಬ್ಬಿಣ ನೇಗಿಲು, ಸ್ಪ್ರೇಯರುಗಳು, ಬಿತ್ತನೆ ಕೂರಿಗೆಗಳು ಇತ್ಯಾದಿ ಅಲ್ಲದೆ ಎತ್ತು ಮತ್ತು ಎತ್ತಿನ ಗಾಡಿಗಳನ್ನು ಮುಫತ್ತಾಗಿ ಹಾಗೂ ರಿಯಾಯತಿ (ಸಬ್ಸಿಡಿ) ದರದಲ್ಲಿ ಅರ್ಹ ರೈತರಿಗೆ ಒದಗಿಸಲಾಗುವುದು.

ಆದರೆ ಈ ಕೃಷಿ ಸವಲತ್ತುಗಳ ವಿತರಣೆಯಲ್ಲಿ ಭಾರೀ ಪ್ರಮಾಣದ ಅವ್ಯವಹಾರಗಳು ನಡೆಯುತ್ತಿರುವುದಾಗಿ ದೂರುಗಳು ಕೇಳಿಬರುತ್ತಿವೆ. ಈ ಬಗ್ಗೆ ಪತ್ರಿಕೆಗಳಲ್ಲೂ ಸುದ್ದಿಗಳು ಪ್ರಕಟವಾಗಿದೆ.

ರೈತರಿಗೆ ಕೊಡಬೇಕಾದ ಕೃಷಿ ಸವಲತ್ತುಗಳನ್ನು ಕೃಷಿ ಇಲಾಖೆಯ ಅಧಿಕಾರಿಗಳು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು, ಇಲ್ಲವೇ ಮಾರಾಟ ಮಾಡುವುದು, ಮುಫತ್ತಾಗಿ ಕೊಡುವುದನ್ನು ಸಬ್ಸಿಡಿ ಎಂದು ಹೇಳಿ ಹಣ ಪಡೆಯುವುದು, ರೈತರಿಗೆ ವಿತರಣೆ ಮಾಡದೆ ಸುಳ್ಳು ಸಹಿ, ಹೆಬ್ಬೆಟ್ಟುಗಳನ್ನು ಹಾಕಿ ದಾಖಲೆಗಳನ್ನು ಸೃಷ್ಟಿಸುವುದು, ಇವು ಅವ್ಯವಹಾರದ ಕೆಲವು ಮಾದರಿಗಳು.

ಈ ವರ್ಷ ಬರಪರಿಹಾರ ಯೋಜನೆ, ಖುಷ್ಕಿ ಬೇಸಾಯ ಯೋಜನೆ, ಇತ್ಯಾದಿಗಳಲ್ಲಿ ಭತ್ತ, ರಾಗಿ, ಕಡಲೆ, ಹೆಸರು, ತೊಗರಿ, ಜೋಳ, ಅಲಸಂದೆ, ಸೂರ್ಯಕಾಂತಿ ಮೊದಲಾದ ಬಿತ್ತನೆ ಬೀಜಗಳನ್ನು ಹಾಗೂ ರಸಗೊಬ್ಬರಗಳನ್ನು ಎಲ್ಲಾ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಭಾರೀ ಪ್ರಮಾಣದಲ್ಲಿ ಈಗಾಗಲೇ ಒದಗಿಸಲಾಗಿದೆ.

ಈ ಸವಲತ್ತುಗಳು ದುರುಪಯೋಗವಾಗದಂತೆ ಹಾಗೂ ನೇರವಾಗಿ ರೈತರಿಗೆ ತಲುಪುವಂತೆ ಮಾಡಲು ರೈತ ಸಂಘದ ಎಲ್ಲಾ ತಾಲ್ಲೂಕು ಘಟಕಗಳು ತಮ್ಮ ತಮ್ಮ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರುಗಳನ್ನು ಭೇಟಿ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘವು ಕರೆ ಕೊಡುತ್ತದೆ. ರೈತರಿಗೆ ಮೋಸ ಮಾಡುವ, ಅವ್ಯವಹಾರಗಳನ್ನು ನಡೆಸುವ ಕೃಷಿ ಇಲಾಖೆಯ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಗೊಳ್ಳಬೇಕೆಂದು ಸರಕಾರವನ್ನು ಆಗ್ರಹಪಡಿಸುತ್ತದೆ.

ರೈತ ಬಾಂಧವರೇ ಕೃಷಿ ಇಲಾಖೆಯ ಸವಲತ್ತುಗಳನ್ನು ತಪ್ಪದೆ ಇಂದೇ ಪಡೆದುಕೊಳ್ಳಿರಿ.

ಐಕ್ಯರಂಗ ಸಹಾಯ ನಿಧಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಪತ್ರವಾದ ಐಕ್ಯರಂಗವನ್ನು ಇನ್ನೂ ಉತ್ತಮಗೊಳಿಸಬೇಕು, ರೈತ ಕಾರ್ಮಿಕರ ಚಳುವಳಿಗೆ, ಎಡಶಕ್ತಿಗಳ ಬೆಳವಣಿಗೆಗೆ, ಜನತಾ ಪ್ರಜಾಪ್ರಭುತ್ವ ಸ್ಥಾಪನೆಗೆ ಹಾಗೆಯೇ ಸಮತಾವಾದಿ ಕ್ರಾಂತಿಗೆ ಸಹಾಯವಾಗುವ ಅಸ್ತ್ರವನ್ನಾಗಿ ಅದನ್ನು ಉಪಯೋಗಿಸಬೇಕೆಂಬ ಉದ್ದೇಶದಿಂದ ರೂ. 2 ಲಕ್ಷ ಧನಸಹಾಯ ಕೂಡಿಸಬೇಕೆಂದು ರಾಜ್ಯ ಸಮಿತಿ ನಿರ್ಣಯಿಸಿದೆ.

ಸಂಗ್ರಹದ ವಿವರ:

ಹಿಂದಿನ ಸಂಗ್ರಹ	14271-00
ಎನ್. ಕೆ. ಉಪಾಧ್ಯಾಯರ ಮೂಲಕ ಸಂಗ್ರಹ	
ವಿಠ್ಠಲ ಸಾಕ್ರೆ, ಬಿಜಾಪುರ	30-00
ಎಚ್. ಎಸ್. ಮಸೂತಿ	10-00
ಆರ್. ಎಸ್. ಕಟ್ಟಿರ	5-00
ವಿ. ಬಿ. ಅಂಬೇಕರ	5.00
ಹೇರಲಗಿ	5-00
ಖಾನ್ ಸಾಬ	10-00
ಅಜ್ಜಿಲ್ಲಾಯ, ಬಿಜಾಪುರ	40-00
ಗೋಪಾಲ ಇಂಡಸ್ಟ್ರಿಸ್, ಬಿಜಾಪುರ	500-00
ಅರಕೇರಿ, ಇಂಜಿನಿಯರ್, ಬಿಜಾಪುರ	200-00
ಪಾಟೀಲ್, ಇಂಜಿನಿಯರ್, ಬಿಜಾಪುರ	200-00
ಬಾಬು ಸಾಲಿಮನ್, ಬಿಜಾಪುರ	100-00
ಬಾಬು, ಹೋಟೆಲ್ ಇಂಟರ್ ನ್ಯಾಶನಲ್ ಬಿಜಾಪುರ	50-00
ಆರ್. ಚಂದ್ರು, ಹುಬ್ಬಳ್ಳಿ	100-00
ಒಟ್ಟು	15526-00

ಭೀಕರ ಬರಗಾಲ - ಅಸಮರ್ಪಕ ಪರಿಹಾರ

(2ನೆಯ ಪುಟದಿಂದ)

ಹಸಿರು ರೇಶನ್ ಕಾರ್ಡುಗಳ ಮೂಲಕ ವಾರ್ಷಿಕ ರೂ 3600 ಆದಾಯಕ್ಕಿಂತ ಅಥವಾ ನಿಗದಿತ ಪ್ರಮಾಣಕ್ಕಿಂತ ಕಡಿಮೆ ವ್ಯವಸಾಯ ಭೂಮಿ ಇರುವ ಪ್ರತಿಬಡಕುಟುಂಬಗಳಿಗೆ ತಿಂಗಳಿಗೆ 10 ಕೆ. ಜಿ. ಆಹಾರ ಧಾನ್ಯಗಳನ್ನು ಕೆಜಿಗೆ ರೂ. 1.50 ರ ಅಗ್ಗದ ದರದಲ್ಲಿ ಒದಗಿಸುವ ಕಾರ್ಯಕ್ರಮ ನವಂಬರ್, 1985ರಲ್ಲಿ ಪ್ರಾರಂಭಗೊಂಡಿದೆ. ಈ ಯೋಜನೆಯ ಪ್ರಯೋಜನ ಸುಮಾರು 24 ಲಕ್ಷ ಬಡಕುಟುಂಬಗಳಿಗೆ 12000 ನ್ಯಾಯ ಬೆಲೆ ಅಂಗಡಿಗಳ ಮೂಲಕ ಈಗಾಗಲೇ ಸಿಗುತ್ತಿದೆ ಎಂದು ಸರಕಾರ ಹೇಳಿಕೊಂಡಿದೆ. ಈ ಯೋಜನೆಯು ಸ್ವಾಗತಾರ್ಹ. ಆಹಾರ ಧಾನ್ಯಗಳೊಂದಿಗೇ ಇತರ ಜೀವನಾವಶ್ಯಕ ವಸ್ತುಗಳನ್ನೂ (ಸಕ್ಕರೆ, ಅಡಿಗೆ ತೈಲ, ಸೀಮೆಎಣ್ಣೆ, ಹಿಟ್ಟು) ಅಗ್ಗದ ಬೆಲೆಗಳಲ್ಲಿ ಈ ಬಡಕುಟುಂಬಗಳಿಗೆ ಒದಗಿಸುವ ಯೋಜನೆಯನ್ನು ಮೆಚ್ಚಬೇಕಾದದ್ದು. ಆದರೆ ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಬೇಕು, ಮುಂದುವರಿಸಿಕೊಂಡು ಹೋಗಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶದ ಎಲ್ಲಾ ಬಡಕುಟುಂಬಗಳಿಗೂ ನ್ಯಾಯ ಬೆಲೆಗಳಲ್ಲಿ ಜೀವನಾವಶ್ಯಕ ವಸ್ತುಗಳು ಸಿಗುವಂತಾಗಬೇಕು. ಜೊತೆಗೇ, ಕೃಷಿ ಕಾರ್ಮಿಕರಿಗೂ, ಬಡರೈತರಿಗೂ ಉದ್ಯೋಗಾವಕಾಶ ನಿರಂತರವಾಗಿ ಒದಗಿಸಬೇಕು. ಬಡಕುಟುಂಬಗಳಿಗೆ ಉದ್ಯೋಗವೇ ಇಲ್ಲದಿದ್ದರೆ, ಕೂಲಿಗಳಿಗೆ ಇಲ್ಲದಿದ್ದರೆ. ಅಗ್ಗದ ಜೀವನಾವಶ್ಯಕ ವಸ್ತುಗಳನ್ನೂ ಖರೀದಿಸಲಿಕ್ಕೆ ಸಾಧ್ಯವಿಲ್ಲ. ಇದು ಮುಖ್ಯವಾಗಿ ಗಮನಿಸಬೇಕಾದವಿಷಯ. ಈ ಮಧ್ಯೆ, ಆಹಾರ, ಧಾನ್ಯಗಳ ಕೊರತೆಯಿಂದ, ಶಾಲೆಗಳಲ್ಲಿ ಮಧ್ಯಾಹ್ನ ಊಟ ತಿಂಡಿ ಕೊಡುವ ಕಾರ್ಯಕ್ರಮ ಸ್ಥಗಿತಗೊಂಡಿದ್ದು, ಶಾಲೆಗಳಲ್ಲಿ ಹಾಜರಾತಿ ಗಣನೀಯವಾಗಿ ಕಡಿಮೆ ಆಗಿದೆ. ಆಹಾರ ಧಾನ್ಯಗಳ, ಸರಕಾರಿಗಳ, ತೆಂಗಿನಕಾಯಿ ಮೊದಲಾದವುಗಳ ಬೆಲೆಗಳು ವಿಪರೀತ ಏರಿವೆ.

ಬರಗಾಲದ ರಾಜಕೀಯ ಅರ್ಥಶಾಸ್ತ್ರ :

ಕರ್ನಾಟಕದಲ್ಲಿ ಈ ವರ್ಷದಂತಹ ಬರಗಾಲ ಕಳೆದ ನೂರು ವರ್ಷಗಳಲ್ಲಿ ಬರಲಿಲ್ಲವೆಂದೂ, 1942ರ, 1971ರ, 1980 ರ ಬರಗಾಲಗಳಿಗಿಂತಲೂ ಈ ವರ್ಷದ ಬರಗಾಲ ಹೆಚ್ಚು ಭೀಕರವೆಂದೂ ಅಭಿಪ್ರಾಯ ಪಡಲಾಗಿದೆ. ದೇಶದ ಶೇ. 50 ರಷ್ಟು ಜನತೆ ಬಡತನ ರೇಖೆಯ ಕೆಳಮಟ್ಟದಲ್ಲಿದ್ದು, ನೆರೆ-ಬರಗಾಲದಂತಹ ನೈಸರ್ಗಿಕ ವಿಕೋಪಗಳಿಗೂ ಭೂ-ರಹಿತ ಕೃಷಿ ಕಾರ್ಮಿಕರ, ಬಡರೈತರ ಮತ್ತು ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ಸಾಮೂಹಿಕವಾಗಿ ವಲಸೆ ಹೋಗಿರುವ ಲಕ್ಷಾಂತರ ಬಡಕುಟುಂಬಗಳೇ ಬಲಿಯಾಗುತ್ತಿವೆ. ಮೊದಲೇ ನಿರುದ್ಯೋಗ, ಬಡತನ, ಬೆಲೆಏರಿಕೆ, ನಿರಕ್ಷರತೆ, ಅನಾರೋಗ್ಯಕ್ಕೆ ಒಳಗಾಗಿರುವ ಈ ಬಡಕುಟುಂಬಗಳು ಬರಗಾಲದಲ್ಲಿ ಇನ್ನಷ್ಟೂ ನಿರ್ಗತಿಕರಾಗುವರು. ಗ್ರಾಹಕ ಶಕ್ತಿಯನ್ನು ಕಳೆದುಕೊಳ್ಳುವರು. ಪರಿಹಾರ ಕೇಂದ್ರಗಳನ್ನು ಬಡವರಿಗೆ ದಾನ, ಧರ್ಮ ಮಾಡುವ ಪರೋಪಕಾರಿ ದೃಷ್ಟಿಯಿಂದ ನಡೆಸಲಾಗುತ್ತಿದೆಯೇ ಹೊರತು ಉದ್ಯೋಗ ಪಡೆಯುವುದು ಬಡಜನರ ಮೂಲಭೂತ ಹಕ್ಕು ಎಂದು ಗೌರವಿಸಲಾಗುತ್ತಿಲ್ಲ. ಬರಗಾಲದಲ್ಲಿಯೇ ಅಗ್ಗದ ಕೂಲಿಯಿಂದ ಖಾಸಗೀ ಮತ್ತು ಸಾರ್ವಜನಿಕ ಕೆಲಸಗಳನ್ನು ಕೈಕೊಳ್ಳುವುದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಸ್ತಿವಂತ ಶ್ರೀಮಂತರಿಗೆ ಹೆಚ್ಚು ಪ್ರಯೋಜನಗಳಾಗುವುವು.

ಬರಗಾಲ ಪ್ರದೇಶಗಳಲ್ಲಿ ಪ್ರತಿ ದಿನ ಪ್ರತಿ ರಾಜ್ಯದಲ್ಲಿ ರೂ. 1 ಕೋಟಿಯಷ್ಟು ಪರಿಹಾರ ಕಾರ್ಯಗಳಿಗೆ ವಿನಿಯೋಗವಾಗುತ್ತಿದೆ ಎಂದು ಸರಕಾರದ ಲೆಕ್ಕಾಚಾರ. ಈ ಬೃಹತ್ ಪ್ರಮಾಣದ ವೆಚ್ಚಕ್ಕೂ ಬೆಲೆಏರಿಕೆ, ತೆರಿಗೆ ಹೆಚ್ಚಳ, ಕೃತಕಹಣ ಸೃಷ್ಟಿ, ಶ್ರೀಮಂತರಿಂದ ಸಾಲ, ಇತ್ಯಾದಿ ಮೂಲಗಳಿಂದಲೇ ಸಂಪನ್ಮೂಲ ಪಡೆಯಲಾಗುತ್ತಿದೆ. ಶ್ರೀಮಂತ ರೈತರ, ಭೂ ಮಾಲೀಕರ, ವ್ಯಾಪಾರೋದ್ಯಮಿಗಳ, ಬಹುರಾಷ್ಟ್ರೀಯ ಸಂಸ್ಥೆಗಳ ಆದಾಯ, ಆಸ್ತಿ, ಲಾಭಗಳ ಮೇಲೆ, ಕಪ್ಪು ಹಣದ ಮೇಲೆ ತೆರಿಗೆ ಸಂಗ್ರಹ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಆರ್ಥಿಕ ಅಭಿವೃದ್ಧಿ ಕಾರ್ಯಗಳಲ್ಲಿ ಭ್ರಷ್ಟಾಚಾರ, ಅದಕ್ಷತೆ, ರಾಜಕೀಯ ಹಸ್ತಕ್ಷೇಪ, ಮಧ್ಯವರ್ತಿಗಳಿಂದ ಶೋಷಣೆ ಆದಂತೆ, ಬರಗಾಲ ಪರಿಹಾರ ಕಾರ್ಯಗಳಿಗೆ ತೊಡಗಿಸುವ ಹಣವೂ ಬಹಳಷ್ಟು ಸೋರಿಹೋಗುತ್ತಿದೆ. ಕಾ॥ ಲೆನಿನ್ ರಷ್ಯದ ಕ್ರಾಂತಿ ಪೂರ್ವದ ಲೇಖನಗಳಲ್ಲಿ ತಿಳಿಸಿದ್ದಾರೆ ಭೂ ಮಾಲೀಕರು ಬಂಡವಾಳಶಾಹಿಗಳು ಬರಗಾಲ ಬರಲಿ ಎಂದು ದೇವರನ್ನು ಪ್ರಾರ್ಥಿಸುತ್ತಿದ್ದರೆಂದು. ಕಾರಣ ಆ ನೆವದಲ್ಲಿ ಬಡವರಿಂದ ಅಗ್ಗದ ಕೂಲಿಯಲ್ಲಿ ದುಡಿಮೆ ಪಡೆಯಬಹುದು, ಪರಿಹಾರ ಕಾರ್ಯಗಳಲ್ಲಿ ತೊಡಗಿಸಿದ ಹಣವನ್ನು ಕಬಳಿಸಬಹುದು ! ನಮ್ಮ ದೇಶದ ಆಳುವ ವರ್ಗಗಳೂ ಇಂತಹ ಅನುಭವಗಳಿಗೆ ಹೊರತಾಗಿಲ್ಲ. ಬಡತನ ನಿವಾರಣೆ, ನಿರುದ್ಯೋಗ ನಿವಾರಣೆ, ಇತ್ಯಾದಿ ಅನೇಕ ಕಾರ್ಯಕ್ರಮಗಳ ಮೂಲಕ ಮಧ್ಯವರ್ತಿಗಳೂ, ಆಳುವ ವರ್ಗದ ರಾಜಕೀಯ ಪುಡಾರಿಗಳೂ ತಮ್ಮ ಬೊಕ್ಕಸ ತುಂಬಿಸಿಕೊಳ್ಳುವರು. ನೆರೆ-ಬರಗಾಲಗಳಂತಹ ನೈಸರ್ಗಿಕ ಅನಾಹುತಗಳಿಂದ ಆರ್ಥಿಕ ಅಭಿವೃದ್ಧಿಯೂ ಕುಂಠಿತವಾಗುವುದು. ಆಸ್ತಿ, ಆದಾಯಗಳ ನ್ಯಾಯ ಹಂಚಿಕೆ ಇದ್ದರೆ ನೈಸರ್ಗಿಕ ಅನಾಹುತಗಳ ಬಿಸಿ ಸಾರ್ವತ್ರಿಕವಾಗಿ ಹಂಚಿಹೋಗುವುದು, ಬಡಕುಟುಂಬಗಳಿಗೆ ಮಾತ್ರ ತಟ್ಟುವುದಿಲ್ಲ.

ಸಧ್ಯದ ಶೋಷಕ ಸಮಾಜದಲ್ಲಿ, ಭೂಮಾಲಿಕ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ-ರಾಜಕೀಯ ವಿಷಯಗಳಿಗೆ ಸಂಘಟಿಕ ಸಾಮೂಹಿಕ ಹೋರಾಟಗಳನ್ನು ಜನಕೋಟಿ, ದುಡಿಯುವ ವರ್ಗ ಮುಂದುವರೆಸುತ್ತಿದ್ದಂತೆಯೇ, ನೈಸರ್ಗಿಕ ಅನಾಹುತಗಳ ವಿರುದ್ಧವೂ ಹೋರಾಡಬೇಕಾಗಿದೆ. ಪರಿಹಾರ ಕಾರ್ಯಗಳಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ಕೃಷಿ ಕಾರ್ಮಿಕರ, ಬಡರೈತರ, ಕೈಗಾರಿಕಾ ಕಾರ್ಮಿಕ ಸಂಘಟನೆಗಳು, ಪಂಚಾಯತುಗಳು, ಜಿಲ್ಲಾ ಸಮಿತಿಗಳು, ಸಕ್ರಿಯವಾಗಿ ಭಾಗವಹಿಸಬೇಕು. ಭ್ರಷ್ಟಾಚಾರಗಳನ್ನು ಬಯಲಿಗೆಳೆಯಬೇಕು. ದೀರ್ಘಕಾಲಿಕ ಪರಿಹಾರಗಳ ಕುರಿತು, ಪರಿಸರ ಸಂರಕ್ಷಣೆ, ಅರಣ್ಯ ರಕ್ಷಣೆ, ನೀರಾವರಿ ಸೌಕರ್ಯಗಳ ಕುರಿತು ಜನಜಾಗೃತಿ ಮೂಡಿಸಬೇಕು.

ಹೆಗಡೆ-ಚವ್ಹಾಣ ಮಾತುಕತೆ

(1ನೇ ಪುಟದಿಂದ)

ವಣೆಗೆ ಅದರ ಲಾಭ ತಮಗೂ ಸಿಗಬೇಕೆಂದು ಮಹಾರಾಷ್ಟ್ರದ ಜನತಾ ಪಕ್ಷ, ಎಸ್. ಎಂ. ಜೋಷಿ ಶರದ್ ಪವಾರ ಮೊದಲಾದವರೂ ಅದರಲ್ಲಿ ಸೇರಿದರು. ಜನತಾಪಕ್ಷದ ಕೇಂದ್ರದಿಂದ ಆದೇಶ ಬಂದನಂತರ ಮಧುದಂಡವತೆ ಹಿಂದೆ ಸರಿದು ತನ್ನ ಚೇಲಾಗಳನ್ನು ಮುಂದೆ ಮಾಡಿದರು. ಗಡಿ ಪ್ರಶ್ನೆ ಕೇಂದ್ರದ ಜವಾಬ್ದಾರಿ ಎಂದು ಮನಗಂಡ ಈ ಜನ ಅದನ್ನು ಬಿಟ್ಟುಕೊಟ್ಟು ಒತ್ತಾಯದ ಕನ್ನಡ ಹೇರಿಕೆಯ ನೆವದಲ್ಲಿ ಸತ್ಯಾಗ್ರಹ ಹೂಡಿದರು, ದಂಗೆ ಎಬ್ಬಿಸಿದರು. ತಮ್ಮ ಸಮಿತಿಯಲ್ಲಿ ಶಿವಸೇನೆ ಸೇರಿದರೆ ಹಿಂಸಾಕೃತ್ಯಗಳಾಗುತ್ತವೆಂಬ ಎಚ್ಚರಿಕೆ ನೀಡಿದರೂ ಕೇಳಲಿಲ್ಲ. ದೊಂಬಿಗೆ ಪುಟಕೊಟ್ಟರು. ಮ. ಏ. ಸಮಿತಿ ಗಡಿಪ್ರದೇಶಕ್ಕಾಗಿ ಚಳುವಳಿ ಹೂಡಿದರೆ, ಎಸ್. ಎಂ. ಜೋಶಿ, ಶರದ ಪವಾರ ಕನ್ನಡ ಹೇರಿಕೆಯ ನೆಪ ಹೇಳಿ ಸತ್ಯಾಗ್ರಹ, ಹಿಂಸಾಚಾರಕ್ಕೆ ಕೈಹಾಕಿದರು.

ಈ ಮಧ್ಯೆ ಚಳುವಳಿ ಕುರಿತು ಮೌನ ಆಚರಿಸಿದ್ದ ಕಾಂಗ್ರೈ ಮಧ್ಯೆ ಪ್ರವೇಶಿಸಿದಂತೆ ಕಂಡು ಬರುತ್ತದೆ. ಮ ಏ. ಸಮಿತಿಯ ಮಾಜಿ ಶಾಸಕ ಕ್ಯಾನಾಯಕ್ ತಮ್ಮ ಬೆಂಬಲಿಗರೊಂದಿಗೆ ಚಳುವಳಿಯನ್ನು ವಿರೋಧಿಸಿ ಪ್ರಕಟಣೆಯಿತ್ತರು. ಗಡಿ ಸಮಸ್ಯೆ ಕೇಂದ್ರದ ಜವಾಬ್ದಾರಿ ಎಂದು ಹೇಳಿದರು. ಕ್ಯಾನಾಯಕ ಗುಂಪು ಕಾಂಗ್ರೈ ಪರ ವಾಗಿದೆಂಬ ವದಂತಿಯಿದೆ,

ಕರ್ನಾಟಕ ಮಹಾರಾಷ್ಟ್ರಗಡಿ ಸಮಸ್ಯೆಯನ್ನು ಪರಿಹಾರಕ್ಕೆ ಮಹಾಜನ ವರದಿಯೇ ರಾಮಬಾಣವೆಂದು ಹೇಳಿಕೆ ನೀಡಿ ರಾಜೀವ್‌ಗಾಂಧಿಯವರು ಜನತಾ ಕಾಂಗ್ರೈ ಮುಖಂಡರಿಂದ ವ್ಹಾವ್ಹಾ ಎಂದೆನಿಸಿಕೊಂಡು ಸುಮ್ಮನಾಗಿದ್ದಾರೆ. ಅವರೆಲ್ಲರೂ "ಮಹಾಜನವರದಿ ಜ್ಯಾರಿಗೆ ಬರಲಿ" ಎಂಬ ಮಂತ್ರ ಪಠಿಸುವಂತೆ ಮಾಡಿದ್ದಾರೆ.

ಜನರ ಹತ್ಯೆ, ಸರಕಾರಿ-ಖಾಸಗಿ ಆಸ್ತಿನಾಶ, ದೊಂಬಿ, ಅಶಾಂತಿಗಳ ಮಧ್ಯೆ ಕರ್ನಾಟಕ-ಮಹಾರಾಷ್ಟ್ರ ಸರಕಾರಗಳು, ಕೇಂದ್ರ ಸರಕಾರ ಹಾಗೆಯೆ ಕಾಂಗ್ರೈ, ಜನತಾ, ಶರದಪವಾರ, ಜೋಶಿ ಮೊದಲಾದವರೆಲ್ಲ ತಮಾಷೆ ನೋಡುತ್ತಿದ್ದಾರೆ. ರಾಜಕೀಯಲಾಭ ಪಡೆಯುವ ಹೊಂಚಿನಲ್ಲಿದ್ದಾರೆ. ಎರಡು ಕಮ್ಯುನಿಸ್ಟ್ ಪಾರ್ಟಿಗಳು ಬಿಟ್ಟುಬೇರೆ ಯಾವ ಪಕ್ಷವೂ ಗಡಿಸಮಸ್ಯೆಯ ಕುರಿತು ನಿರ್ದಿಷ್ಟ ನಿಲುವು ಹೊಂದಿಲ್ಲೆಂದು ಕನ್ನಡ ಪ್ರಭ ದಿನಪತ್ರಿಕೆ ಸಂಪಾದಕೀಯದಲ್ಲಿ ಅಭಿಪ್ರಾಯ ವ್ಯಕ್ತಮಾಡಿರುವುದು ವಾಸ್ತವಾಂಶವೇ ಸರಿ.

1982ರಲ್ಲಿ ಕನ್ನಡ ದುರಭಿಮಾನಿಗಳು, ಗೋಕಾಕ ಸಮಿತಿ ಮೂಲಕ ಅಲ್ಪಸಂಖ್ಯಾಕರ ಮೇಲೆ ಕನ್ನಡ ಹೇರಿದಾಗಲೂ ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷ ಎಲ್ಲರಿಗೂ ತನ್ಮ ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯುವ ಅಧಿಕಾರವಿದೆಂದು ವಾದಿಸಿತ್ತು. ಕನ್ನಡ ಕಡ್ಡಾಯವಾಗಿ ಹೇರುವುದು ಸರಿಯಲ್ಲೆಂದು ಈಗಲೂ ಹೇಳುತ್ತಿದೆ. ರಾಮಕೃಷ್ಣ ಹೆಗಡೆಯವರು ಮಹಾಜನ ವರದಿ ಪ್ರಕಾರ ಮಹಾರಾಷ್ಟ್ರಕ್ಕೆ ಸೇರಬಹುದಾದ ಪ್ರದೇಶದಲ್ಲಿ ಕನ್ನಡ ಕಡ್ಡಾಯ ನೀತಿ ಕೈಬಿಡಬಹುದೆಂಬ ಅಭಿಪ್ರಾಯವನ್ನು ಈಗ ವ್ಯಕ್ತ ಮಾಡುತ್ತಿದ್ದಾರೆ.

ಗಡಿಸಮಸ್ಯೆಯ ಕುರಿತು ಸಿ ಪಿ.ಐ. (ಎಂ) ರಾಜ್ಯ ಸಮಿತಿ ಹಾಗೆಯೇ ಹೆಗಡೆಯವರು ಕರೆದ ಸರ್ವಪಕ್ಷಗಳಸಭೆಯಲ್ಲಿ ಸೆಕ್ರೆಟಾರಿಯೇಟ್ ಸದಸ್ಯರಾದ ಸೂರ್ಯನಾರಾಯಣರಾವ್ ಹೇಳಿದಂತೆ ನಮ್ಮ ದೇಶದ ಹಲವಾರು ರಾಜ್ಯಗಳು ಗಡಿಸಮಸ್ಯೆಯನ್ನೆದುರಿಸುತ್ತಿವೆ, ಸಮಗ್ರದೃಷ್ಟಿಕೋನದಿಂದ ಅವುಗಳ ಬಗೆಹರಿಯಬೇಕು. ದೇಶದ ಜನತೆ ಬೆಲೆ ಏರಿಕೆ, ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ, ಬರಗಾಲ, ಕಂಪ್ಯೂಟರೀಕರಣಗಳಂತ ಜೀವನ್ಮರಣ ಸಮಸ್ಯೆಗಳನ್ನೆದುರಿಸುತ್ತಿರುವಾಗ, ಇಷ್ಟು ವರ್ಷ ಶಾಂತರೀತಿಯಿಂದ ಜೀವನ ನಡೆಸುತ್ತ ಬಂದ ಗಡಿ ಪ್ರದೇಶದಲ್ಲಿ ಅಶಾಂತಿ ಉಂಟುಮಾಡುವುದೆಂದರೆ, ಜನರ ಗಮನವನ್ನು ಬೇರೆಡೆಗೆ ಹರಿಸಲು ನಡೆಸಿರುವ ಕುತಂತ್ರವೆಂದೇ ಹೇಳಬೇಕಾಗುತ್ತದೆ. ಈ ತರದ ಚಳುವಳಿ ಖಂಡನೀಯ. ಅಂಥ ಚಳುವಳಿಯನ್ನೆದುರಿಸಲು ಹೆಗಡೆ-ಚವ್ಹಾಣ ಸರಕಾರಗಳು ಕೈಗೊಂಡ ನಿಲುವು ಅಸಮರ್ಪಕ.

ಈ ಬಂಡವಳಶಾಹಿ ಪಕ್ಷಗಳ ದ್ವಿಮುಖ ನೀತಿಯನ್ನು ಬಯಲಿಗೆಳೆಯಬೇಕು. ಗಡಿಪ್ರದೇಶದ ಚಳುವಳಿಯನ್ನು ಖಂಡಿಸಬೇಕು. ಅಲ್ಲಿ ಸೌಹಾರ್ದತೆ ಕಾಪಾಡಬೇಕು.

ಯಾವದೇ ಸಮಸ್ಯೆಯನ್ನು ಮಾತುಕತೆಯಿಂದ ಸೌಹಾರ್ದಯುತವಾಗಿಬಗೆಹರಿಸುವಂತೆ ಒತ್ತಾಯಿಸಬೇಕು. ಯಾಕೆಂದರೆ ಇಂಥ ಚಳುವಳಿ ದೇಶದ ಸಮಗ್ರತೆಗೆ,ಬೇರೆ ಭಾಷಿಕ ಜನಾಂಗದ ಸ್ನೇಹ ಸೌಹಾರ್ದತೆಗೆ ಮಾರಕ. ವಿಭಜಕ ಶಕ್ತಿಗಳಿಗಷ್ಟೇ ಅವು ಸಹಾಯಕ.

ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ನಿಲ್ಲಿಸಿ

"ಕೇಂದ್ರದ ಯೋಜನೆಗಳಿಗೆ ಮಾರ್ಗದರ್ಶನ ನೀಡಲು, ಅಡೆತಡೆಗಳನ್ನು ನಿವಾರಿಸಲು, ವೇಳೆಗೆ ಸರಿಯಾಗಿ ಅವು ಪೂರ್ಣ ಗೊಳ್ಳುವಂತೆ ಕಾರ್ಯಕ್ರಮ ನಿರ್ಧರಿಸಲು" ರತನ ಟಾಟಾ ಅವರ ಅಧ್ಯಕ್ಷತೆಯಲ್ಲಿ ಆರು ಜನ ಖಾಸಗೀ ಕ್ಷೇತ್ರದ ಗುತ್ತೇದಾರರನ್ನೊಳಗೊಂಡ ರಾಷ್ಟ್ರೀಯ ಸಲಹಾ ಸಮಿತಿಯೊಂದನ್ನು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ಇಳಿಸುವ ಮಂತ್ರಿಯವರು ನೇಮಕ ಮಾಡಿದ್ದಾರೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ, ಅದರ ಕುರಿತು ಸಿ. ಐ. ಟಿ. ಯು ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ಆಶ್ಚರ್ಯವ್ಯಕ್ತಮಾಡಿದ್ದಾರೆ ಖಾಸಗೀ ಬಂಡವಲದಾರರು. ಸಾರ್ವಜನಿಕ ಕ್ಷೇತ್ರವನ್ನು ಬಲವಾಗಿ ವಿರೋಧಿಸುತ್ತ ಬಂದಿದ್ದಾರೆ. ತಮ್ಮ ಸಂಪತ್ತನ್ನು ಕ್ರೋಢೀಕರಿಸುವ ದುರಾಸೆಯಿಂದಲೇ ಆ ಜನ ಯೋಜನೆಗಳು ಸರಳವಾಗಿ ಪೂರ್ಣಗೊಳ್ಳುವುದಕ್ಕೆ ಆತಂಕ ಒಡ್ಡುತ್ತಿದ್ದಾರೆ, ಮತ್ತು ಅವುಗಳ ಖರ್ಚು ಹೆಚ್ಚಾಗುವಂತೆ ಮಾಡುತ್ತಿದ್ದಾರೆ ಎಂಬ ಅಂಶವನ್ನು ಮಂತ್ರಿವರ್ಯರು ಮರೆತಂತೆ ಕಂಡು ಬರುತ್ತದೆ ಮಂತ್ರಿಗಳು ಈ ವಿಷಯವನ್ನು ಪ್ರಕಟಿಸಿದ ರೀತಿಯನ್ನು ನೋಡುವಾಗ ಅಭಿವೃದ್ಧಿ ಕೆಲಸಗಳನ್ನು ಸಕಾಲದಲ್ಲಿ ಮುಟ್ಟಿಸಲು ಸಾರ್ವಜನಿಕ ಕ್ಷೇತ್ರದ ಅಧಿಕಾರಿಗಳನ್ನು, ಕಾರ್ಮಿಕರನ್ನೂ ನಂಬಲಿಕ್ಕೆ ಸಾಧ್ಯವಿಲ್ಲೆಂಬ ಅಭಿಪ್ರಾಯಕ್ಕೆ ಬಂದಂತೆ ಕಾಣುತ್ತದೆ. ರೇಲ್ವೆ, ವಾಹತುಕ, ವಿದ್ಯುಚ್ಛಕ್ತಿ, ಸಿಮೆಂಟ್ ಮೊದಲಾದಗಳನ್ನು ಒದಗಿಸುವುದರಲ್ಲಿ ಅಡೆತಡೆಗಳುಂಟಾಗುತ್ತವೆಂಬ ಕಟ್ಟುಕತೆಗಳು ಹಿಂದಿನಕಾಲದ ಬುದ್ಧಿ ಭ್ರಮೆ ಅವಶೇಷಗಳೆಂಬುದನ್ನು ಮಂತ್ರಿಗಳ ಹೇಳಿಕೆ ಎತ್ತಿ ತೋರಿಸುತ್ತದೆ. ಹಿಂದಿನ ಹೇಳಿಕೆಗಳೆಲ್ಲ ನಿಜವಾಗಿದ್ದರೆ, ಈಗಿನ ಕ್ರಮ ಎಲ್ಲವನ್ನೂ ಖಾಸಗಿಯವರಿಗೆ ಒಪ್ಪಿಸುವ, ಅರ್ಜುನಸಿಂಗ ಕಮಿಟಿಯ ಶಿಫಾರಸಿನಂತೆ ಸಾರ್ವಜನಿಕ ಕ್ಷೇತ್ರವನ್ನು ಅವಹೇಳನ ಮಾಡುವ ನೀತಿಯಾಗುತ್ತದೆ. ಮೊನ್ನೆತಾನೇ ಕೈಗಾರಿಕೆಗಳ ಕೇಂದ್ರ ಸಲಹಾಸಮಿತಿ ಶಿಫಾರಸುಗಳನ್ನು ಒಪ್ಪಿಲ್ಲೆಂಬ ಕೈಗಾರಿಕಾ ಮಂತ್ರಿಯವ ಹೇಳಿಕೆ ಸುಳ್ಳಾದಂತಾಗುತ್ತದೆ.

ಅಂಥ ಕಮೀಟಿಯನ್ನು ನೇಮಿಸುವುದೆಂದರೆ ತ್ರಿಪಕ್ಷೀಯತೆಯನ್ನು ಆಡಳಿತೆಯಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆಯನ್ನೂ [illegible]ಲ್ಲಂಘಿಸಿದಂತಾಗುತ್ತದೆ. ಅದೇ ಸಮ[illegible]ಗ ಕಾರ್ಮಿಕ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿಸಿದ ಸಾರ್ವಜನಿಕ ಕ್ಷೇತ್ರದ ಕಮಿಟಿಯ ಕೆಲಸವನ್ನು ನಿರುಪಯುಕ್ತಗೊಳಿಸಿದಂತಾಗುತ್ತದೆ.

ಬಟ್ಟೆ ಗಿರಣಿ ಮುಚ್ಚುವದನ್ನು ವಿರೋಧಿಸಿರಿ

ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿರುವ ಲಾಭದಾಯಕವಲ್ಲದ ಬಟ್ಟೆಗಿರಣಿಗಳನ್ನು ಮುಚ್ಚಲಾಗುವುದು. ಅವುಗಳಲ್ಲಿ ದುಡಿಯುತ್ತಿರುವ ಕೆಲಸಗಾರರ "ಯೋಗಕ್ಷೇಮವನ್ನು" "ಪುನರ್ವಸತಿ ನಿಧಿ"ಯಿಂದ ನೋಡಿಕೊಳ್ಳಲಾಗುವುದು. ಮೊದಲನೇ ವರ್ಷ ಅವರಿಗೆ ಶೇ 75 ರಷ್ಟು ವೇತನ, ಎರಡನೇ ವರ್ಷ ಶೇ 50 ರಷ್ಟು, ಮೂರನೇವರ್ಷ ಶೇ 25 ರಷ್ಟು ನೀಡಿ ಅನಂತರ "ತಮ್ಮ ಉಪ ಜೀವನದ ಬೇರೆ ದಾರಿ ಹುಡುಕಲು" ಅವರನ್ನು ಬೀದಿಗೆಸೆಯಲಾಗುವುದು. ಜೂನ 1 ರಂದು ಪತ್ರಿಕೆಗಳಲ್ಲಿ ಪ್ರಕಟವಾದ ವರದಿ ಕೇಂದ್ರ ಸರಕಾರದ ನೀತಿಯನ್ನು ಬಯಲಿಗೆಳೆದಿದೆ. ಲಕ್ಷಾಂತರ ಬಟ್ಟೆ ಗಿರಣಿ ಕೆಲಸಗಾರರನ್ನು ಬೀದಿಪಾಲು ಮಾಡುವ ಕೇಂದ್ರ ಸರಕಾರದ ನೀತಿಯನ್ನು ಬಯಲಿಗೆಳೆದಿದೆ. ಲಕ್ಷಾಂತರ ಬಟ್ಟೆಗಿರಣಿ ಕೆಲಸಗಾರರನ್ನು ಬೀದಿ ಪಾಲು ಮಾಡುವ ಕೇಂದ್ರ ಸರ್ಕಾರದ ನೀತಿಯನ್ನು ಸಿ.ಐ.ಟಿ ಯು. ಅಧ್ಯಕ್ಷರಾದ ಬಿ. ಡಿ. ರಣದಿವೆಯವರು ಬಲವಾಗಿ ಖಂಡಿಸಿದ್ದಾರೆ.

ಕೇಂದ್ರ ಸರಕಾರದ ಹೊಸ ಬಟ್ಟೆ ನೀತಿಯನ್ನು ಸಿ.ಐ ಟಿ.ಯು ಮತ್ತು ಇತರ ಕಾರ್ಮಿಕ ಸಂಘಗಳು ಖಂಡಿಸಿವೆ. ಸರಕಾರದ ನೀತಿಯ ಪರಿಣಾಮ ಈಗ ಹೊರಬೀಳುತ್ತಿದೆ. ಪ್ರತಿ ವರ್ಷ ಸರಾಸರಿಯಾಗಿ 5 ಬಟ್ಟೆಗಿರಣಿಗಳನ್ನು ಮುಚ್ಚುವ ಯೋಜನೆ ಸರಕಾರಕ್ಕಿರುವಂತೆ ಕಂಡು ಬರುತ್ತದೆ. ಆದರೆ ಹೊಸ ಘಟಕಗಳನ್ನು ನಿರ್ಮಿಸುವ ವಿಚಾರವಿದ್ದಂತಿಲ್ಲ. ಹೋದ ವರ್ಷ ಪುನರ್ವಸತಿ ನಿಧಿಯ ಕುರಿತು ಚರ್ಚಿಸಲು ಕೇಂದ್ರ ಸರಕಾರ ಸಭೆ ಕರೆದಾಗ ಎಲ್ಲ ಕಾರ್ಮಿಕ ಸಂಘಗಳು ಅದನ್ನು ವಿರೋಧಿಸಿದ್ದವು. ಸರಕಾರ ಕಾರ್ಮಿಕ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಕೆಂಚಿತ್ತು ಬೆಲೆಕೊಡದೆ, ಕೆಲವೇ ದೊಡ್ಡ ಗಿರಣಿ ಮಾಲಿಕರ ಮತ್ತು ಸಾರ್ವಜನಿಕ ಕ್ಷೇತ್ರದ ಕುರಿತು ನೇಮಿಸಲ್ಪಟ್ಟ ಅರ್ಜುನ ಸೇನ ಗುಪ್ತಾ ಅವರ ಶಿಫಾರಸಿನಂತೆ ಗಿರಣಿಗಳನ್ನು ಮುಚ್ಚಿ ಕಾರ್ಮಿಕರನ್ನು ಉಪವಾಸಕೆಡವುವ ನೀತಿಯನ್ನೇ ಕೇಂದ್ರ ಸರಕಾರ ಮುಂದುವರಿಸಿದೆ. ಈಗಾಗಲೇ ಒಂದು ನೂರರಷ್ಟು ಕಾರ್ಖಾನೆಗಳು ಮುಚ್ಚಲ್ಪಟ್ಟು ಲಕ್ಷಾವಧಿ ಜನ ನಿರುದ್ಯೋಗಿಗಳಾಗಿದ್ದಾರೆ. ಸಿ.ಐ ಟಿಯು. ಸರಕಾರದ ಈ ನೀತಿಯನ್ನು ಖಂಡಿಸುತ್ತದೆಂದೂ, ಇತರ ಕಾರ್ಮಿಕ ಕೇಂದ್ರಗಳೂ, ರಾಜ್ಯ ಸಮಿತಿಗಳೂ ಸೇರಿ ಸರಕಾರದ ಈ ನೀತಿಯ ಬದಲಾವಣೆಗೆ ಹೋರಾಡಬೇಕೆಂದು ಬಿ. ಟಿ. ರಣದಿವೆಯವರು ಹೇಳಿದ್ದಾರೆ.

ಬಿ. ಟಿ. ರಣದಿವೆಯವರು ಮತ್ತೊಂದು ಹೇಳಿಕೆಯಲ್ಲಿ ಪಿಯರ್‌ಲೆಸ್ ಕಂಪೆನಿಯನ್ನು ರಾಷ್ಟ್ರೀಕರಣ ಮಾಡಬೇಕೆಂದು. ಎಲ್ಲಾ ಸಿಐಟಿಯು ಕೇಂದ್ರಗಳು ಸರಕಾರವನ್ನು ಒತ್ತಾಯಿಸಬೇಕೆಂದು ಕೇಳಿಕೊಂಡಿದ್ದಾರೆ.

ಓದುಗರಲ್ಲಿ ವಿನಂತಿ

ಪ್ರಿಂಟಿಂಗ್ ತೊಂದರೆಯಿಂದಾಗಿ ಮತ್ತು ಕೇಂದ್ರ ಸರಕಾರದ ರಜೆಯಿಂದಾಗಿ 8-12-86 ರ ಪತ್ರಿಕೆ ಕಳುಹಿಸಲು ತಡವಾಯಿತು. ಓದುಗರೂ, ಏಜಂಟರೂ ಕ್ಷಮಿಸಬೇಕು.

ಸಂಪಾದಕ ಮಂಡಳಿ

ಇತ್ತ ಗಮನಿಸಿ

ಮೇ ಶತಮಾನೋತ್ಸವ ಇಡೀ ವರ್ಷ ಆಚರಿಸಲ್ಪಡುವುದರಿಂದ ಮೇ ದಿನಾಚರಣೆಗೆ ಸಂಬಂಧ ಪಟ್ಟ ಲೇಖನ, ಮಾಹಿತಿಗಳನ್ನೊಳಗೊಂಡ ಐಕ್ಯರಂಗದ ಮೇ ದಿನದ ವಿಶೇಷಾಂಕವನ್ನು ತರಿಸಿ ಓದ ಬೇಕೆಂದೂ, ಮಾರಾಟ ಮಾಡಬೇಕೆಂದೂ ಪಾರ್ಟಿ ಸದಸ್ಯರಿಗೆ, ಹಿತೈಷಿಗಳಿಗೆ ಕೇಳಿಕೊಳ್ಳುತ್ತೇವೆ.

ಸಂಪಾದಕ ಮಂಡಳಿ

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya